# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ನವೆಂಬರ್ 18, 2024

ಸಂಪುಟ : 51 ಸಂಚಿಕೆ : 185 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




**ಭಜನಾ ಸ್ಪರ್ಧೆ ...** ಜೈನ್ ಮಿಲನ್ ಹಾಗೂ ಆದಿನಾಥ ಜೈನ್ ಮಿಲನ್ ಮತ್ತು ಸಮಸ್ತ ದಿಗಂಬರ ಜೈನ ಸಮಾಜದದಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಭಾನುವಾರ ನಡೆದ ದಾವಣಗೆರೆ ವಿಭಾಗ ಮಟ್ಟದ ಕಿರಿಯರ ಜಿನ ಭಜನಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಪುಟಾಣಿಗಳು.

## ಮಣಿಪುರದಲ್ಲಿ ಸಚಿವ, ಶಾಸಕರ ಮನೆಗೆ ಬೆಂಕಿ

ಇಂಫಾಲ್, ನ. 17 – ಮಣಿಪುರದ ಇಂಫಾಲ್ ಕಣಿವೆಯಲ್ಲಿ ಓರ್ವ ಸಚಿವ ಹಾಗೂ ಮೂವರು ಶಾಸಕರ ಮನೆಗಳಿಗೆ ಪ್ರತಿಭಟನಾಕಾರರು ಬೆಂಕಿ ಹಚ್ಚಿದ್ದಾರೆ. ಮುಖ್ಯಮಂತ್ರಿ ಎ. ಬಿರೇನ್ ಸಿಂಗ್ ಅವರ ಪೂರ್ವಿಕರ ಮನೆಗೆ ನುಗ್ಗುವ ಪ್ರಯತ್ನವನ್ನೂ ನಡೆಸಿದ್ದಾರೆ.

ಮೂವರು ಮಹಿಳೆಯರು ಹಾಗೂ ಮೂವರು ಮಕ್ಕಳನ್ನು ಜಿರ್ಬಮ್ ಜಿಲ್ಲೆಯಲ್ಲಿ ಉಗ್ರರು ಹತ್ಯೆಗೈದಿದ್ದರು. ಇದರ ವಿರುದ್ಧ ಜನರು ಹಿಂಸಾತ್ಮಕ ಪ್ರತಿಭಟನೆ ನಡೆಸಿದ್ದಾರೆ.

ಜನರು ಹಿಂಸಾತ್ಮಕ ಪ್ರತಿಭಟನೆ ನಡೆಸಿ ಶನಿವಾರದಂದು ಮೂವರು ಸಚಿವರು ಹಾಗೂ ಆರು ಶಾಸಕರ ಮನೆಗಳ ಮೇಲೆ ದಾಳಿ ನಡೆಸಲಾಗಿತ್ತು. ನಂತರ ಈ ಭಾಗದಲ್ಲಿ ನಿಷೇಧಾಜ್ಞೆ ಹೇರಲಾಗಿತ್ತು.

ಪೂರ್ವ ಇಂಫಾಲದಲ್ಲಿರುವ ಲೋಕೋಪಯೋಗಿ ಸಚಿವ ಗೋವಿಂದದಾಸ್ ಕೊಂಥೌಜಮ್, ಬಿಜೆಪಿ ಶಾಸಕರಾದ ವೈ. ರಾಧೇಶ್ಯಾಮ್, ವಾಗ್‌ಜಿಂಗ್ ಟೆಂಥ ಹಾಗೂ ಕಾಂಗ್ರೆಸ್ ಶಾಸಕ ಲೋಕೇಶ್ವರ್ ಮನೆಗಳಿಗೆ ಬೆಂಕಿ ಹಚ್ಚಲಾಗಿದೆ.

ಬೆಂಕಿ ಹಚ್ಚಿದಾಗ ಶಾಸಕರು ಹಾಗೂ ಅವರ ಕುಟುಂಬದವರು ಸ್ಥಳದಲ್ಲಿ ಇರಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಪೂರ್ವ ಇಂಫಾಲದಲ್ಲಿರುವ ಬಿರೇನ್ ಸಿಂಗ್ ಪೂರ್ವಿಕರ ಮನೆ ಕಡೆಗೆ ಪ್ರತಿಭಟನಾಕಾರರು ತೆರಳಿದ್ದರು. ಆದರೆ, ಭದ್ರತಾ ಪಡೆಗಳು ಜನರನ್ನು ತಡೆದಿದ್ದಾರೆ.

ಪ್ರತಿಭಟನಾಕಾರರನ್ನು ಚೆದುರಿಸಲು ಭದ್ರತಾ ಸಿಬ್ಬಂದಿ ಅಶ್ರುವಾಯು ಹಾಗೂ ರಬ್ಬರ್ ಗುಂಡುಗಳನ್ನು ಸಿಡಿಸಿದರು.

# ದೂರಗಾಮಿ ಹೈಪರ್‌ಸಾನಿಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ



### ಆಯ್ದ ಕೆಲವೇ ದೇಶಗಳ ಸಾಲಿಗೆ ಭಾರತ ಸೇರ್ಪಡೆ

ನವದೆಹಲಿ, ನ. 17- ಒಡಿಶಾ ಕರಾವಳಿಯಲ್ಲಿ ದೂರಗಾಮಿ ಹೈಪರ್ ಸಾನಿಕ್ ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಈ ರೀತಿ ಶಸ್ತ್ರ ಹೊಂದಿರುವ ಕೆಲವೇ ದೇಶಗಳ ಸಾಲಿಗೆ ಭಾರತ ಸೇರ್ಪಡೆಯಾಗಿದೆ.

ದೂರಗಾಮಿ ಹೈಪರ್‌ಸಾನಿಕ್ ಕ್ಷಿಪಣಿಯು ಉನ್ನತ ವೇಗ ಹೊಂದಿರುತ್ತದೆ ಹಾಗೂ ಬಹಳಷ್ಟು ವೈಮಾನಿಕ ರಕ್ಷಣೆ ಮೀರುವ ಸಾಮರ್ಥ್ಯ ಹೊಂದಿದೆ.

ಶನಿವಾರ ದೂರಗಾಮಿ ಹೈಪರ್‌ಸಾನಿಕ್ ಕ್ಷಿಪಣಿ ಪರೀಕ್ಷೆ ನಡೆಸಲಾಗಿದೆ. ಇದು ಮಹತ್ವದ ಸಾಧನೆ ಹಾಗೂ ಐತಿಹಾಸಿಕ ಕ್ಷಣ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ರಕ್ಷಣಾ ಸಂಶೋಧನಾ ಸಂಸ್ಥೆಯಾದ ಡಿ.ಆರ್.ಡಿ.ಒ. ಈ ಕ್ಷಿಪಣಿಯನ್ನು ರೂಪಿಸಿದೆ. ಇದು 1,500ಕ್ಕೂ ಹೆಚ್ಚು ಕಿ.ಮೀ. ದೂರದವರೆಗೆ ಸಾಗುವ ಸಾಮರ್ಥ್ಯ ಹೊಂದಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಾಮಾನ್ಯವಾಗಿ ಹೈಪರ್‌ಸಾನಿಕ್ ಕ್ಷಿಪಣಿಗಳು ಸಮುದ್ರ ಮಟ್ಟದಲ್ಲಿ ಶಬ್ದಕ್ಕಿಂತ ಐದು ಪಟ್ಟು ಹೆಚ್ಚು (ಗಂಟೆಗೆ 1,220 ಕಿ.ಮೀ.) ವೇಗದಲ್ಲಿ ಸಾಗುವ ಸಾಮರ್ಥ್ಯ ಹೊಂದಿರುತ್ತವೆ.

ಆದರೆ, ಕೆಲ ಹೈಪರ್‌ಸಾನಿಕ ಕ್ಷಿಪಣಿಗಳು ಶಬ್ದದ ವೇಗಕ್ಕಿಂತ 15 ಪಟ್ಟು ಹೆಚ್ಚು ವೇಗವಾಗಿ ಸಾಗುವ ಸಾಮರ್ಥ್ಯವನ್ನೂ ಹೊಂದಿವೆ.

ಪ್ರಸಕ್ತ ರಷ್ಯಾ ಹಾಗೂ ಚೀನಾ ಹೈಪರ್‌ಸಾನಿಕ್ ಕ್ಷಿಪಣಿ ವಲಯದಲ್ಲಿ ಮುಂಚೂಣಿಯಲ್ಲಿವೆ. ಅಮೆರಿಕ ಈ ರೀತಿಯ ಹಲವು ಕ್ಷಿಪಣಿಗಳನ್ನು ರೂಪಿಸುವ ಮಹತ್ವಾಕಾಂಕ್ಷೆ ಹೊಂದಿದೆ.

ಫ್ರಾನ್ಸ್, ಜರ್ಮನಿ, ಆಸ್ಟ್ರೇಲಿಯ, ಜಪಾನ್, ಇರಾನ್ ಹಾಗೂ ಇಸ್ರೇಲ್ ಸಹ ಇಂತಹ ಕ್ಷಿಪಣಿಗಳನ್ನು ರೂಪಿಸುವ ಯೋಜನೆ ಹೊಂದಿವೆ.

ಹೈಪರ್ ಸಾನಿಕ್ ಕ್ಷಿಪಣಿಗಳು ತಮ್ಮ ಮಾರ್ಗವನ್ನು ಬದಲಿಸುವ ಸಾಮರ್ಥ್ಯ ಹೊಂದಿರುತ್ತವೆ. ಬ್ಯಾಲಿಸ್ಟಿಕ್ ಕ್ಷಿಪಣಿಗಳು ಶಬ್ದಕ್ಕಿಂತ ಐದು (3ನೇ ಪುಟಕ್ಕೆ)

# ವಿಜೃಂಭಿಸುತ್ತಿರುವ ಕುಟುಂಬ ರಾಜಕಾರಣ

## ಸ್ವಾಭಿಮಾನಿ ಬಳಗದ ಉದ್ಘಾಟನಾ ಕಾರ್ಯಕ್ರಮದಲ್ಲಿ ಬಸವಪ್ರಭು ಶ್ರೀ ವಿಶಾದ



ದಾವಣಗೆರೆ, ನ. 17- ಕುಟುಂಬ ರಾಜಕಾರಣಕ್ಕೆ ಅಂತ್ಯ ಯಾವಾಗ ? ಎಂಬ ಪ್ರಶ್ನೆ ಎಲ್ಲರ ಮನದಲ್ಲಿ ಕಾಡುತ್ತಿದೆ. ಕೇವಲ ಒಬ್ಬರಿಗೆ ಎರಡು ಬಾರಿ ಮಾತ್ರ ಶಾಸಕ ಅಥವಾ ಸಂಸದರಾಗಬೇಕೆಂಬ ಕಾಯ್ದೆ ಜಾರಿಗೆ ಬರಬೇಕಾದ ಅಗತ್ಯ ಇದೆ ಎಂದು ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಹೇಳಿದರು.

ನಗರದ ಎಸ್.ಎಸ್.ಬಡಾವಣೆಯ 'ಎ' ಬ್ಲಾಕ್‌ನಲ್ಲಿ ಆಯೋಜಿಸಲಾಗಿದ್ದ ಸ್ವಾಭಿಮಾನಿ ಬಳಗದ ಉದ್ಘಾಟನೆ, ವೆಬ್‌ಸೈಟ್‌ಗೆ ಚಾಲನೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಸಮಾರಂಭದ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಎಲ್ಲೆಡೆ ಕುಟುಂಬ ರಾಜಕಾರಣ ಬೆಳೆಯುತ್ತಲೇ ಇದೆ. ಕುಟುಂಬ ಮಾತ್ರ ಅಧಿಕಾರದಲ್ಲಿರಬೇಕೆಂಬ ದುರಾಸೆ ಬಹಳ ರಾಜಕಾರಣಿಗಳಲ್ಲಿ ಬೆಳೆದು ಬಂದಿದೆ. ಇಡೀ ದೇಶಾದ್ಯಂತ ಕುಟುಂಬ ರಾಜಕಾರಣ ವಿಜೃಂಭಿಸುತ್ತಿದೆ ಎಂದರು.

ಪ್ರಸ್ತುತ ಒಬ್ಬ ಶಾಸಕ, ಸಂಸದನಾಗಲು ಕನಿಷ್ಠ ನೂರು ಕೋಟಿ ರೂ. ಖರ್ಚು ಮಾಡುತ್ತಾರೆಂದರೆ ಇಂದಿನ ರಾಜಕೀಯ ಪರಿಸ್ಥಿತಿ ಯಾವ ಹಂತ ತಲುಪಿದೆ ಎಂಬುದನ್ನು ಅರಿಯಬೇಕಾಗಿದೆ. ವ್ಯಕ್ತಿಗೆ ದುಡ್ಡು, ಅಂತಸ್ತು ದೊಡ್ಡದಲ್ಲ ಸ್ವಾಭಿಮಾನ, ಸ್ವಾವಲಂಬನೆ, ಪ್ರಾಮಾಣಿಕತೆ ದೊಡ್ಡದು. ಈ ನಿಟ್ಟಿನಲ್ಲಿ ಸ್ವಾಭಿಮಾನಿಯಾಗಿ ಜನರ ಮನ ಗೆದ್ದಿರುವ ವಿನಯ್ ಕುಮಾರ್ ಅವರಂತಹ ನಾಯಕತ್ವ ಇಂದು ಅಗತ್ಯವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸ್ವಾಭಿಮಾನಿ ಬಳಗದ ಸಂಸ್ಥಾಪಕ ರಾಜ್ಯಾಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ಮಾತನಾಡಿ, ಶೂನ್ಯದಿಂದ ಆರಂಭ ಇಂದು ಬೃಹದಾಕಾರವಾಗಿ ಇನ್‌ಸೈಟ್ಸ್ ಐಎಎಸ್ ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದೇನೆ. ಅದರಂತೆ ಸ್ವಾಭಿಮಾನಿ ಬಳಗ ಕಟ್ಟಿದ್ದೇನೆ ಎಂದು ತಿಳಿಸಿದರು. (2ನೇ ಪುಟಕ್ಕೆ)

# ಖಾಸಗಿ ಕಾರ್ಯಕ್ರಮಕ್ಕೆ ಹೈಸ್ಕೂಲ್ ಮೈದಾನ ಬೇಡ



### ಮಾರ್ನಿಂಗ್ ಸ್ಟಾರ್ ಫುಟ್‌ಬಾಲ್ ಕ್ಲಬ್‌ನಿಂದ ಆಟವಾಡಿ ಪ್ರತಿಭಟನೆ

ದಾವಣಗೆರೆ, ನ.17- ಹೈಸ್ಕೂಲ್ ಮೈದಾನವನ್ನು ಪ್ರತಿ ನಿತ್ಯವೂ ಖಾಸಗಿ ಕಾರ್ಯಕ್ರಮಗಳಿಗೆ ನೀಡಿ ಕ್ರೀಡಾಪಟುಗಳಿಗೆ ತೊಂದರೆ ಮಾಡುತ್ತಿರುವ ಆಡಳಿತ ಮಂಡಳಿಯ ನೀತಿ ಖಂಡಿಸಿ ಪಾಲಿಕೆ ಮುಂಭಾಗದ ಪಿ.ಬಿ ರಸ್ತೆಯಲ್ಲೇ ಮಾರ್ನಿಂಗ್ ಸ್ಟಾರ್ ಫುಟ್ ಬಾಲ್ ಕ್ಲಬ್‌ನ ಸದಸ್ಯರು ಭಾನುವಾರ ಬೆಳಗ್ಗೆ ವಿನೂತನ ಪ್ರತಿಭಟನೆ ನಡೆಸಿದರು.

ಕ್ರೀಡಾಪಟುಗಳು, ಕ್ಲಬ್‌ನ ಸದಸ್ಯರು ಮತ್ತು ಕ್ರೀಡಾ ಪ್ರೇಮಿಗಳು ಪಾಲಿಕೆ ಮುಂಭಾಗದ ಪಿ.ಬಿ ರಸ್ತೆಯಲ್ಲೇ ಕ್ರಿಕೆಟ್, ಫುಟ್ ಬಾಲ್ ಆಟಗಳನ್ನು ಆಡುವ ಮೂಲಕ ಹೈಸ್ಕೂಲ್ ಮೈದಾನ ಆಡಳಿತ ಮಂಡಳಿ ವಿರುದ್ಧ ಆಕ್ರೋಶ ಹೊರಹಾಕಿದರು.

ಈ ವೇಳೆ ಕ್ರೀಡಾಪಟು ವೀರೇಶ್ ಮಾತನಾಡಿ, ಹೈಸ್ಕೂಲ್ ಮೈದಾನದಲ್ಲಿ ಖಾಸಗಿ ಕಾರ್ಯಕ್ರಮಗಳಿಗೆ ಅನುಮತಿ ನೀಡುತ್ತಿರುವುದರಿಂದ ಕ್ರೀಡಾಪಟುಗಳಿಗೆ ತೊಂದರೆ ಆಗುತ್ತಿದೆ. ಇದೇ ರೀತಿ ಮೈದಾನದ ಆಡಳಿತ ಮಂಡಳಿ ನಡೆದುಕೊಂಡರೆ ಮುಂದಿನ ಪೀಳಿಗೆಗೆ ಮೈದಾನ ಉಳಿಸಲು ಉಗ್ರ ಹೋರಾಟ ಮಾಡುವುದು ನಿಶ್ಚಿತ ಎಂದು ಎಚ್ಚರಿಸಿದರು.

ಈಗಾಗಲೇ ಮೈದಾನ ಹಾಳಾಗಿದ್ದು, ಯುವಕರಿಗೆ ಆಟವಾಡಲು ಹಾಗೂ ಹಿರಿಯ ನಾಗರಿಕರಿಗೆ ವಾಕಿಂಗ್ ಮಾಡಲು ತೊಂದರೆ ಆಗುತ್ತಿದೆ ಎಂದು ದೂರಿದರು.

ಮೈದಾನ ಮೈದಾನವಾಗಿಯೇ ಇರಬೇಕು. ಹಣದ ಆಸೆಗೆ ಅದನ್ನು ಬಾಡಿಗೆ ಕೊಟ್ಟವರಿಗೆ ದೊಡ್ಡ ಧಿಕ್ಕಾರವಿರಲಿ ಎಂದ ಅವರು, ಮೈದಾನದ ಜಾಗ ಕಬಳಿಸುವ ದೊಡ್ಡ ಹುನ್ನಾರ ನಡೆದಿದೆ ಎಂದು ಆರೋಪಿಸಿದರು.

ಮಂಜುನಾಥ ಕುಕ್ಕುವಾಡ ಮಾತನಾಡಿ, ಬಸ್ ನಿಲ್ದಾಣ, ಪಟಾಕಿ ಮಾರಾಟಕ್ಕೆ ಅವಕಾಶ ಸೇರಿದಂತೆ ಅನೇಕ ರಾಜಕೀಯ ಕಾರ್ಯಕ್ರಮಗಳು ಹಾಗೂ ಎಕ್ಸಿಬಿಷನ್'ಗಳಿಗೆ ಅವಕಾಶ ನೀಡುತ್ತಿರುವುದರಿಂದ ನಮಗೆ ವಾರಕ್ಕೊಮ್ಮೆ ಆದರೂ ಆಡಲು ಜಾಗ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು.

ಮೈದಾನದ ಮೇಲೆ ರಾಜಕೀಯ ಪ್ರಭಾವ ತುಂಬಾ ಇದೆ. ಹೈಸ್ಕೂಲ್ ಮೈದಾನ ಹೋರಾಟ ಸಮಿತಿ ರಚಿಸಿಕೊಂಡು ನಿರಂತರ ಹೋರಾಟ ಮಾಡೋಣ ಎಂದು ತಿಳಿಸಿದರು. ಈ ವೇಳೆ ಕಾಂತರಾಜ್, ನೂರ್ ಅಹಮದ್, ನಯಾಜ್ ಅಹ್ಮದ್, ಯೂಸುಫ್, ಆನಂದ್, ಕ್ರೀಡಾಪಟುಗಳು ಹಾಗೂ ಕ್ರೀಡಾಭಿಮಾನಿಗಳು ಇದ್ದರು.

## ಹೊನ್ನಾಳಿ ಸರ್ಕಾರಿ ಬಸ್‌ನಿಲ್ದಾಣಕ್ಕೆ 'ವೀರರಾಣಿ ಕಿತ್ತೂರು ಚೆನ್ನಮ್ಮ' ಹೆಸರು

### ಹೊನ್ನಾಳಿ ಪುರಸಭೆ ಸಾಮಾನ್ಯ ಸಭೆಯಲ್ಲಿ ತೀರ್ಮಾನ

ಹೊನ್ನಾಳಿ, ನ.17- ಪಟ್ಟಣದ ಸರ್ಕಾರಿ ಬಸ್ ನಿಲ್ದಾಣಕ್ಕೆ ವೀರರಾಣಿ ಕಿತ್ತೂರು ಚೆನ್ನಮ್ಮ ಎಂದು ನಾಮಕರಣ ಮಾಡಲು ಹೊನ್ನಾಳಿ ಪುರಸಭೆಯು ಸರ್ವಾನುಮತದಿಂದ ತೀರ್ಮಾನ ಕೈಗೊಂಡ ಬಗ್ಗೆ ವರದಿಯಾಗಿದೆ.

ಹೊನ್ನಾಳಿ ಪುರಸಭೆಯ ನೂತನ ಅಧ್ಯಕ್ಷ ಮೈಲಪ್ಪನವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಮೊದಲ ಸಾಮಾನ್ಯ ಸಭೆಯಲ್ಲಿ ಶಾಸಕ ಶಾಂತನಗೌಡರ ಸಮ್ಮುಖದಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ಸಭೆಯ 22ನೇ ವಿಷಯವಾಗಿ ದೊಡ್ಡಪೇಟೆ ಪುರಸಭೆ ಸದಸ್ಯರಾದ ಪದ್ಮಾ ಪ್ರಶಾಂತ ಅವರು, ಬಸ್ ನಿಲ್ದಾಣಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ಹೆಸರಿಡುವಂತೆ ಮನವಿ ಮಾಡಿದರು. ಇದಕ್ಕೆ ಉಪಸ್ಥಿತರಿದ್ದ ಪುರಸಭೆ (3ನೇ ಪುಟಕ್ಕೆ)

## ಲಾಭದಾಯಕ ಹುದ್ದೆ ಅನರ್ಹತೆಯ ಕಾಯ್ದೆ ವಾಪಸ್

ನವದೆಹಲಿ, ನ. 17 – ಲಾಭದಾಯಕ ಹುದ್ದೆಗಳನ್ನು ಹೊಂದಿರುವ ಆಧಾರದ ಮೇಲೆ ಸಂಸದರನ್ನು ಅನರ್ಹಗೊಳಿಸುವ 65 ವರ್ಷಗಳ ಹಳೆಯ ಕಾಯ್ದೆ ವಾಪಸ್ ಪಡೆಯಲು ಕೇಂದ್ರ ಸರ್ಕಾರ ಮುಂದಾಗಿದೆ. ಬದಲಾದ ಪರಿಸ್ಥಿತಿಗಳಿಗೆ ಅನುಗುಣವಾಗಿ ಹೊಸ ಕಾಯ್ದೆ ರೂಪಿಸಲಾಗುವುದು.

ಸಂಸತ್ತಿನ (ಅನರ್ಹತೆ ತಡೆ) ಮಸೂದೆ, 2024 ಕರಡು ಮಸೂದೆಯನ್ನು ರೂಪಿಸಲಾಗಿದೆ. ಕಲ್‌ರಾಜ್ ಮಿಶ್ರ ಅವರ ನೇತೃತ್ವದಲ್ಲಿ 16ನೇ ಲೋಕಸಭೆಯ ಜಂಟಿ ಸಂಸದೀಯ ಸಮಿತಿ ನೀಡಿದ ವರದಿಯನ್ನು ಆಧರಿಸಿ ಕರಡು ಮಸೂದೆ ರೂಪಿಸಲಾಗಿದೆ.

1959ರ ಕಾಯ್ದೆಯ ಸೆಕ್ಷನ್ 3ರಲ್ಲಿ ಬದಲಾವಣೆ ತರಲು ಕೇಂದ್ರ ಸರ್ಕಾರ ಮುಂದಾಗಿದೆ. ಈ (3ನೇ ಪುಟಕ್ಕೆ)

# ನಗರದಲ್ಲಿ ಜೈನ ದಿಗಂಬರ ಮುನಿಗಳಿಗೆ ಭಕ್ತಿಯ ಸ್ವಾಗತ




ದಾವಣಗೆರೆ, ನ.17- ಜೈನರ ಗುತ್ತಿಯಲ್ಲಿ ನಡೆಯುವ ಪಂಚ ಕಲ್ಯಾಣಕ ಪ್ರತಿಷ್ಠಾ ಮಹೋತ್ಸವ ಹಾಗೂ ವಿಶ್ವಶಾಂತಿ ಮಹಾಯಜ್ಞದ ನಿಮಿತ್ತ ಮಹಾರಾಷ್ಟ್ರದಿಂದ ಶ್ರವಣಬೆಳಗೊಳಕ್ಕೆ ಹೊರಟ ಆಚಾರ್ಯ ಶ್ರೀ ವಿಶುದ್ಧ ಸಾಗರ ಮಹಾರಾಜರು ಸೇರಿ ದಂತೆ 15ಕ್ಕೂ ಅಧಿಕ ದಿಗಂಬರ ಜೈನ ಮುನಿಗಳನ್ನು ದಾವಣಗೆರೆ ಜೈನ ಸಮುದಾಯದ ಮುಖಂಡರು ಭಾನುವಾರ ಸಂಜೆ ಅರಳಿಮರ ವೃತ್ತದ ಬಳಿ ಶ್ರದ್ಧಾ ಭಕ್ತಿಯಿಂದ ಭರಮಾಡಿಕೊಂಡರು.

ಎನ್.ಆರ್ ರಸ್ತೆಯಲ್ಲಿನ ಪಾರ್ಶ್ವನಾಥ ಜೈನ ಮಂದಿರದಲ್ಲಿ ಮಹಾರಾಜರು ಸ್ವಾಮಿಯ ದರ್ಶನ ಪಡೆದು, ಭಕ್ತರಿಗೆ ಪ್ರವಚನ ನೀಡಿ ಹರಸಿದರು.

ಮಹಾರಾಷ್ಟ್ರದ ನಾಂದನಿಯಿಂದ ಯಾತ್ರೆ ಆರಂಭಿಸಿದ ಜೈನ ಮುನಿಗಳು ಹೂವಿನ ಹಡಗಲಿ, ಹರಪನಹಳ್ಳಿ ಮಾರ್ಗವಾಗಿ ದಾವಣಗೆರೆ ಆಗಮಿಸಿ, ನಗರದ ಹೊರ ವಲಯದ ಆವರಗೆರೆಯ ಸಿದ್ದಲಿಂಗೇಶ್ವರ ಶಾಲೆಯಲ್ಲಿ ವಸತಿ ಮಾಡಿದರು.

ಈ ವೇಳೆ ಜೈನ ಸಮಾಜದ ಮುಖಂಡರಾದ ಜಿತೇಂದ್ರ ಕುಮಾರ್, ಕೋಮಲ್, ಪ್ರಶಾಂತ್, ವಿರೇಂದ್ರ ಕುಮಾರ್, ರಾಜು, ಧರಣೇಂದ್ರ ಪ್ರಸಾದ್, ಮಂಜುನಾಥ್, ನವೀನ್, ಗುಣಪಾಲ್ ಸೇರಿದಂತೆ ಮತ್ತಿತರರಿದ್ದರು.


## ಹನ್ನೆರಡನೇ ವರ್ಷದ ಪುಣ್ಯಸ್ಮರಣೆ



**ದಿ. ಶ್ರೀ ಆರ್.ಎಲ್. ಹನುಮಂತಪ್ಪನವರು**

ಹಿರಿಯ ಕಾರ್ಮಿಕ ಧುರೀಣರು, ನಗರಸಭೆ ಪ್ರಭಾರ ಮಾಜಿ ಅಧ್ಯಕ್ಷರು,
ಕುರುಹಿನಶೆಟ್ಟಿ ಸಮಾಜದ ಹಿರಿಯ ಮುಖಂಡರು

ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ,
ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ : ಶ್ರೀಮತಿ ರತ್ನಮ್ಮ ಹನುಮಂತಪ್ಪ ಮತ್ತು ಪುತ್ರರು,
ಸೊಸೆಯಂದಿರು, ಪುತ್ರಿ, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಕ್ಕಳು,
ಸಹೋದರರು ಹಾಗೂ ಬಂಧು-ಮಿತ್ರರು.

# ಪುಸ್ತಕ ಓದುವ ಹವ್ಯಾಸದಿಂದ ಶಾಲೆ, ಸಮಾಜ ಸುಧಾರಣೆ ಸಾಧ್ಯ



## ಪ್ರೊ. ಎಚ್.ಎ. ಭಿಕ್ಷಾವರ್ತಿಮಠ ಅವರ ಕೃತಿ, ವಚನ ಸ್ಪಂದನ ಲೋಕಾರ್ಪಣೆಯಲ್ಲಿ ಹಿರಿಯ ರಾಜಕೀಯ ಧುರೀಣ ಹೊಳಸಿರಿಗೆರೆ ನಾಗನಗೌಡ್ರು ಅಭಿಮತ

ಹರಿಹರ, ನ. 17 - ಪುಸ್ತಕ ಓದುವ ಹವ್ಯಾಸದಿಂದ ಹಾಗೂ ಸಾಹಿತ್ಯದ ಬಗ್ಗೆ ಆಸಕ್ತಿಯನ್ನು ಹೊಂದುವುದರಿಂದ ಶಾಲೆಗಳು ಮತ್ತು ಸಮಾಜ ಬದಲಾವಣೆ ಆಗುತ್ತದೆ ಎಂದು ಹಿರಿಯ ರಾಜಕೀಯ ಧುರೀಣ ಹೊಳಸಿರಿಗೆರೆ ನಾಗನಗೌಡ್ರು ಅಭಿಪ್ರಾಯಪಟ್ಟರು.

ನಗರದ ಎಸ್.ಜೆ.ವಿ.ಪಿ. ಕಾಲೇಜು ಜಿ.ಎಂ. ಬಸವರಾಜ್ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಪರಸ್ಪರ ಬಳಗ, ಕರ್ನಾಟಕ ಜಾನಪದ ಪರಿಷತ್ತು ಮತ್ತು ಸಾಹಿತ್ಯ ಸಂಗಮ ಇವರ ಸಹಯೋಗದಲ್ಲಿ ಪ್ರೊ. ಎಚ್.ಎ. ಭಿಕ್ಷಾವರ್ತಿಮಠ ಅವರ ಕೃತಿ, ವಚನ ಸ್ಪಂದನ ಲೋಕಾರ್ಪಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಕೈಯಲ್ಲಿ ದೇಶ ಮತ್ತು ರಾಜ್ಯವನ್ನು ಬದಲಾವಣೆ ತರುವುದಕ್ಕೆ ಆಗದೇ ಹೋದರೆ ನಮ್ಮ ಜೀವನದಲ್ಲಿ ಕೆಲವೊಂದು ಉತ್ತಮ ಹವ್ಯಾಸವನ್ನು ಹೊಂದುವ ಮೂಲಕ ಸಮಾಜವನ್ನು ಸುಧಾರಣೆ ತರುವ ನಿಟ್ಟಿನಲ್ಲಿ ಹೆಜ್ಜೆಗಳನ್ನು ಹಾಕಿದಾಗ ಸಮಾಜ ಸುಧಾರಣೆ ತರಬಹುದು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಯುವಕರಲ್ಲಿ ಸಾಹಿತ್ಯವನ್ನು ಬೆಳೆಸಿ ಉಳಿಸುವಂತಹ ಕೆಲಸ ಆಗಬೇಕಿದೆ ಎಂದು ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕೇಂದ್ರ ಸಮಿತಿ ಉಪಾಧ್ಯಕ್ಷ ಕೆ.ಎಂ. ವೀರೇಶ್ ಮಾತನಾಡಿ, ಹಿಂದಿನ ಕಾಲದಿಂದಲೂ ರಚಿತವಾದ ವಚನಗಳು ಎಲ್ಲಾ ವರ್ಗದ ಜನತೆಯ ಸನ್ಮಾರ್ಗಕ್ಕೆ ದಾರಿಯಾಗಿದ್ದು, ಅವುಗಳನ್ನು ರಚಿಸಿದ ಬಸವಣ್ಣನವರೂ, ಸೇರಿದಂತೆ, ಅನೇಕ ದಾರ್ಶನಿಕರು ತಮ್ಮ ವಚನಗಳಿಂದ ನಾಡಿನಾದ್ಯಂತ ಪ್ರಚಲಿತರಾಗಿದ್ದಾರೆ.

ಅಷ್ಟೊಂದು ಶಕ್ತಿ ವಚನಗಳಲ್ಲಿದೆ. ಆದ್ದರಿಂದ ಬಹಳಷ್ಟು ವಿದ್ವತ್ತು ಮತ್ತು ಸಾಹಿತ್ಯವನ್ನು ಒಳಗೊಂಡಂತೆ ಅಂಶಗಳನ್ನು ವಚನ ಸ್ಪಂದನ ಪುಸ್ತಕಗಳಲ್ಲಿ ಪ್ರಕಟಿಸಿದ ಕಾರ್ಯ ಶ್ಲಾಘನೀಯ ಕಾರ್ಯವಾಗಿದೆ. ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಸ್.ಹೆಚ್. ಹೂಗಾರ ಮಾತನಾಡಿ ಪ್ರೊ ಭಿಕ್ಷಾವರ್ತಿಮಠ ಅವರು ಶಿಕ್ಷಣ, ಕಲೆ, ಸಾಹಿತ್ಯ, ನಾಟಕ ಸಮಾಜದ ಎಲ್ಲಾ ರಂಗದಲ್ಲಿ ತೊಡಗಿಸಿಕೊಂಡು, ಬಹಳ ವಿಭಿನ್ನವಾಗಿ ಸಮಾಜದಲ್ಲಿ ಗುರುತಿಸಿಕೊಂಡ ಶ್ರೇಷ್ಠ ಪ್ರಾಧ್ಯಾಪಕರಾಗಿದ್ದಾರೆ ಎಂದರು.

ಸಾಹಿತಿ ಆರ್.ಜಿ. ಹಳ್ಳಿ ನಾಗರಾಜ್ ಮಾತನಾಡಿ, ಪುಸ್ತಕ ಮತ್ತು ಕವಿತೆಗಳು ರಚಿಸಿದ ನಂತರ ಓದುಗರ ಸ್ವತ್ತು ಆಗಬೇಕು. ಆಗ ಅದಕ್ಕೆ ಹೆಚ್ಚಿನ ಮಾನ್ಯತೆ ಪಡೆಯುತ್ತದೆ. ಪುಸ್ತಕಗಳ ಸಂಗಾತಿ ಆದರೆ ಸಮಾಜದಲ್ಲಿ ನಡೆಯುವ ವಿಚಾರಗಳ ಬಗ್ಗೆ ತಿಳಿಯುವುದಕ್ಕೆ ಸಹಕಾರಿ ಆಗುತ್ತದೆ ಎಂದು ಹೇಳಿದರು.

ಪುಸ್ತಕ ಕುರಿತು ಸಾಹಿತ್ಯ ವಿಮರ್ಶಕರು ಪ್ರೊ ಲಿಂಗಾರಾಜ್ ಕಮ್ಮಾರ್ ಮಾತನಾಡಿ, ಶಾಯಿರಿ ಕವಿ ಎಂದೇ ಹೆಸರಾದ ಭಿಕ್ಷಾವರ್ತಿಮಠ ಅವರು ಚುಟುಕು ಕವನಗಳನ್ನು, ಭಾವಗೀತೆಗಳನ್ನು ಬರೆಯುತ್ತಾ, ಹೊಸ ಅಭಿವ್ಯಕ್ತಿಯ ಮಾರ್ಗವನ್ನು ಹುಡುಕುತ್ತಾ ಈಗ ಆಧುನಿಕ ವಚನಗಳ ಬರಹದಲ್ಲಿ ಪಕ್ವತೆಯನ್ನು ಕಂಡುಕೊಂಡಿದ್ದಾರೆ ಎಂದು ಪ್ರಶಂಸಿಸಿದರು.

ನಿವೃತ್ತ ಪ್ರಾಂಶುಪಾಲ ಡಾ. ಎಸ್.ಹೆಚ್. ಪ್ಯಾಟಿ ಮಾತನಾಡಿ, ಪತ್ರಿಕೆ, ಪುಸ್ತಕ ಮತ್ತೊಂದು ಸಾರಿ ನೋಡಲಿಕ್ಕೆ ಅವಕಾಶ ಇರುತ್ತದೆ. ಹಾಗಾಗಿ ಅದು ದಾಖಲೆಯಾಗಿ ಉಳಿಯಲು ಸಾಧ್ಯತೆ ಇದೆ ಎಂದು ಹೇಳಿದರು.

ವಚನ ಸ್ಪಂದನ ಕೃತಿ ರಚಿಸಿರುವ ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ ಮಾತನಾಡಿ, ಕನ್ನಡ ಭಾಷೆಯ ಫೌಂಡೇಶನ್ ಇಲ್ಲದೆ ಹೋದರೆ ಕನ್ನಡದ ಜ್ಞಾನ ಕೊರತೆ ಆಗುತ್ತದೆ. ದಾಸ ಮತ್ತು ವಚನ ಸಾಹಿತ್ಯ ಬಹುತ್ವದ ಬದುಕನ್ನು ಕಟ್ಟಿಕೊಡುತ್ತದೆ.

ಜಿಡ್ಡು ಬಿಟ್ಟು ಬದುಕನ್ನು ಅರಳಿಸುವಂತಹ ಸಮಾಜ ಸುಧಾರಣೆಯ ಅಂಶಗಳನ್ನು ಸಮಾಜಕ್ಕೆ ಕೊಡಬೇಕು ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ನಿವೃತ್ತ ಪ್ರೊಫೆಸರ್ ಹಿರಿಯ ಸಾಹಿತಿ ಸಿ.ವಿ ಪಾಟೀಲ್ ವಹಿಸಿದ್ದರು. ಧರ್ಮಸ್ಥಳ ಸಂಘದ ಮೃತ್ಯುಂಜಯ ಅವರು ಪ್ರೊ. ಭಿಕ್ಷಾವರ್ತಿಮಠ ಅವರ ಪರಿಚಯ ಓದಿದರು.

ಹೆಚ್.ಕೆ. ಕೊಟ್ರಪ್ಪ, ಜೆ. ಕಲಿಂ ಬಾಷಾ ಮಾತನಾಡಿದರು. ಈ ಸಂದರ್ಭದಲ್ಲಿ ಡಿ.ಎಂ. ಅಂಗಡಿ ದಾವಣಗೆರೆ, ಮಾನ್ಯತಾ ವಿದ್ಯಾಸಂಸ್ಥೆ ನಾಡಗೌಡ್ರು, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಬಿ.ಬಿ. ರೇವಣ್ಣನಾಯ್ಕ್, ಎಂ. ಚಿದಾನಂದ ಕಂಚಿಕೇರಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಎನ್.ಎಲ್. ಪ್ರಕಾಶ್, ಸದಸ್ಯ ಎ. ರೀಯಾಜ್ ಆಹ್ಮದ್, ಸಾಹಿತ್ಯ ಸಂಗಮದ ಅಧ್ಯಕ್ಷ ವಿ.ಬಿ. ಕೊಟ್ರೇಶಪ್ಪ, ಕಾರ್ಯದರ್ಶಿ ಎನ್.ಇ. ಸುರೇಶ್, ಶೇಖರಗೌಡ ಪಾಟೀಲ್, ಟಿ. ಇನಾಯತ್ ಉಲ್ಲಾ, ಆರ್. ಮಂಜುನಾಥ್, ಟಿ. ಪಂಚಾಕ್ಷರಿ ಬಿ. ಮುಗ್ದಂ, ರತ್ನಮ್ಮ ಸಾಲಿಮಠ. ಇತರರು ಹಾಜರಿದ್ದರು,

ಪ್ರಾರ್ಥನೆ, ಗೌರಿ ವಿ.ಬಿ. ಕೊಟ್ರೇಶ್ , ಪರಮೇಶ್ವರಪ್ಪ ಕತ್ತಿಗೆ ಹಾಡಿದರು. ಸ್ವಾಗತ ರಿಯಾಜ್ ಆಹ್ಮದ್, ನಿರೂಪಣೆ ಬಿ.ಬಿ. ರೇವಣ್ಣನಾಯ್ಕ್, ವಂದನಾರ್ಪಣೆ ವಿ.ಬಿ. ಕೊಟ್ರೇಶ್ ಮಾಡಿದರು.

# ಶಾಲಾ ಕೊಠಡಿಗಳ ಉದ್ಘಾಟನೆ, ಹಳೇ ವಿದ್ಯಾರ್ಥಿಗಳ ಕಾಳಜಿಗೆ ಮೆಚ್ಚುಗೆ



ಮಲೇಬೆನ್ನೂರು

ಮಲೇಬೆನ್ನೂರು, ನ.17 - ಪಟ್ಟಣದ ಶ್ರೀ ಮಾರುತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲೆಯ ಹಳೇ ವಿದ್ಯಾರ್ಥಿಗಳು ಮತ್ತು ಪೋಷಕರ ಸಹಕಾರದಿಂದ ನಿರ್ಮಿಸಿರುವ ಎರಡು ಕೊಠಡಿಗಳ ಪೈಕಿ ಒಂದು ಕೊಠಡಿಯನ್ನು ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಹರಿಹರ ತಾ. ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್ ಮತ್ತು ಮತ್ತೊಂದು ಕೊಠಡಿಯನ್ನು ಹಳೇ ವಿದ್ಯಾರ್ಥಿಗಳು ಉದ್ಘಾಟಿಸಿದರು. ನಂತರ ಮಾತನಾಡಿದ ಶ್ರೀನಿವಾಸ್ ಅವರು, ಎಲ್ಲಾ ಸರ್ಕಾರಗಳು ಶಿಕ್ಷಣಕ್ಕೆ ಒತ್ತು ಕೊಡುತ್ತಾ ಬಂದಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ಚೆನ್ನಾಗಿ ಓದಿ ಪ್ರಜ್ಞಾವಂತರಾಗಬೇಕೆಂದು ಮನವಿ ಮಾಡಿದರು.

ಶ್ರೀ ಮಾರುತಿ ವಿದ್ಯಾಸಂಸ್ಥೆ ಅಧ್ಯಕ್ಷ ಸತ್ಯನಾರಾಯಣ್ ಜೋಯ್ಸ್, ಕಾರ್ಯದರ್ಶಿ ಎಂ.ಡಿ.ಮುರುಳೀಧರ್ ರಾವ್, ಖಜಾಂಚಿ ಗೋವಿಂದರಾಜ್, ಎಸ್.ಡಿ.ಎಂ.ಸಿ ಅಧ್ಯಕ್ಷ ನಾಗರಾಜ್, ಪುರಸಭೆ ಸದಸ್ಯರಾದ ಸಾಬೀರ್ ಅಲಿ, ಪಿ.ಆರ್.ರಾಜು, ಭೋವಿ ಕುಮಾರ್, ಪುರಸಭೆ ಆಶ್ರಯ ಕಮಿಟಿ ಸದಸ್ಯ ಕಣ್ಣಾಳ್ ನಾಗರಾಜ್, ಮುಖಂಡರಾದ ಯರೇಚಿಕ್ಕನಹಳ್ಳಿ ರಂಗನಾಥ್, ಹಳೇ ವಿದ್ಯಾರ್ಥಿಗಳಾದ ನಿಟ್ಟೂರು ರಾಘವೇಂದ್ರ, ಪವನ್ ಕುಮಾರ್, ಸಾಧಿಕ್ ಮತ್ತು ಇತರರು ಈ ವೇಳೆ ಹಾಜರಿದ್ದರು. ಮುಖ್ಯ ಶಿಕ್ಷಕ ಪರಮೇಶ್ವರಪ್ಪ ಸ್ವಾಗತಿಸಿದರು. ಡಿ.ಬಿ.ಹನುಮಂತಪ್ಪ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ನಗರದಲ್ಲಿ ಇಂದು ಮನೆ ಅಂಗಳದಲ್ಲಿ ಶರಣ ಸಂಗಮ, ದತ್ತಿ ಕಾರ್ಯಕ್ರಮ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದಾವಣಗೆರೆ ಜಿಲ್ಲಾ ಘಟಕದ ವತಿಯಿಂದ ಮನೆ ಅಂಗಳದಲ್ಲಿ ಶರಣ ಸಂಗಮ ದತ್ತಿ (ಲಿ. ಶರಣೆ ಗೌಡಪ್ಪ ಗಂಗಮ್ಮ, ಲಿಂ. ಶರಣ ಗೌಡಪ್ಪ ಹನುಮಪ್ಪ ಶಾಮನೂರು ದಾನಿಗಳು ಶರಣ ಗೌಡಪ್ಪ ಬಸವರಾಜಪ್ಪ ಶಾಮನೂರು) ಕಾರ್ಯಕ್ರಮವು ಇಂದು ಬೆಳಿಗ್ಗೆ 11 ಗಂಟೆಗೆ ಆಂಜನೇಯ ಬಡಾವಣೆಯ ಶ್ರೀ ಬಸವಾನಂದ ನಿಲಯದಲ್ಲಿ ನಡೆಯಲಿದೆ. ಜಿಲ್ಲಾ ಶ.ಸಾ.ಪ. ನಿಕಟಪೂರ್ವ ಅಧ್ಯಕ್ಷ ಚಿಕ್ಕೋಳ್ ಈಶ್ವರಪ್ಪ ಕಾರ್ಯಕ್ರಮದ ಅಧ್ಯ ಕ್ಷತೆ ವಹಿಸಲಿದ್ದಾರೆ. ಅಧ್ಯಕ್ಷ ಕೆ.ಬಿ. ಪರಮೇ ಶ್ವರಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದು, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಸುಮತಿ ಜಯ್ಯಪ್ಪ ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಕುರಿತು ಅನುಭಾವ ನುಡಿಗಳನ್ನಾಡಲಿದ್ದಾರೆ.

# ವಾಲಿಬಾಲ್ ಸ್ಪರ್ಧೆ : ರಾಣೇಬೆನ್ನೂರು ತರಳಬಾಳು ಕಾಲೇಜಿಗೆ 2ನೇ ಸ್ಥಾನ



ರಾಣೇಬೆನ್ನೂರು, ನ.17- ಹುಬ್ಬಳ್ಳಿಯ ವರೂರು ಎ.ಜಿ.ಎಂ.ಆರ್. ರೂರಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ವಿ.ಟಿ.ಯು. ಬೆಳಗಾವಿ ವಲಯ ಮಹಿಳೆಯರ ವಾಲಿಬಾಲ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಇಲ್ಲಿನ ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆದಿದ್ದಾರೆ.

# 9ನೇ ವಾರ್ಡಿನಲ್ಲಿ ಕಾಮಗಾರಿ ಪರಿಶೀಲನೆ



ದಾವಣಗೆರೆ, ನ. 17 - ನಗರ ಪಾಲಿಕೆಯ 9ನೇ ವಾರ್ಡಿನಲ್ಲಿ ಕೈಗೊಂಡಿರುವ ಸ್ವಚ್ಛತಾ ಕಾಮಗಾರಿಯನ್ನು ಮಹಾಪೌರ ಕೆ. ಚಮನ್ ಸಾಬ್ ವೀಕ್ಷಿಸಿದರಲ್ಲದೇ, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿದರು. ಈ ಸಂದರ್ಭದಲ್ಲಿ ಉಪ ಮೇಯರ್ ಸೋಗಿ ಶಾಂತಕುಮಾರ್, ಪಾಲಿಕೆ ಸದಸ್ಯರಾದ ಜಾಕೀರ್ ಅಲಿ, ಮುಖಂಡರು ಹಾಗೂ ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

**ಚಿಕ್ಕತೊಗಲೇರಿ ಜಿ.ಬಿ. ಶಿವಕುಮಾರ್ ನಿಧನ**



ದಾವಣಗೆರೆ ತಾಲ್ಲೂಕು ಚಿಕ್ಕತೊಗಲೇರಿ ಗ್ರಾಮದ ವಾಸಿ ಜಿ.ಬಿ. ಮುರುಗೇಶ್ ರವರ ಸಹೋದರ ಜಿ.ಬಿ. ಶಿವಕುಮಾರ್ (50) ಇವರು ದಿನಾಂಕ : 17.11.2024ರ ಭಾನುವಾರ ಸಂಜೆ 4.50ಕ್ಕೆ ನಿಧನರಾದರು. ಮೃತರ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 18.11.2024ರ ಸೋಮವಾರ 11 ಗಂಟೆಗೆ ಚಿಕ್ಕತೊಗಲೇರಿ ಗ್ರಾಮದಲ್ಲಿ ನೇರವೇರಿಸಲಾಗುವುದು.

**2ನೇ ವರ್ಷದ ಪುಣ್ಯಸ್ಮರಣೆ**



**ದಿ|| ಅಕ್ಕಮಹಾದೇವಿ ರಾಜಶೇಖರಪ್ಪ ಮಾಗಾನಹಳ್ಳಿ**

*ನೀವು ನಮ್ಮನಗಲಿ ಇಂದಿಗೆ 2 ವರ್ಷಗಳಾದವು ಸದಾ ನಿಮ್ಮ ಸ್ಮರಣೆಯಲ್ಲಿರುವ...*

**ರಶ್ಮಿ ಎಂ.ಆರ್**
**ವೀರೇಶ್ ಎಂ.ಆರ್.**
**ಫೋ. : 99456 39508**

**ಶ್ರೀಮತಿ ಗಂಗಮ್ಮ ಕೆ.ಎಸ್. ನಿಧನ**



ದಾವಣಗೆರೆ ಸಿಟಿ ದುರ್ಗಾಂಬಿಕಾ ಬಡಾವಣೆ, 1ನೇ ಮೇನ್, 3ನೇ ಕ್ರಾಸ್, ನಿಟ್ಟುವಳ್ಳಿ ವಾಸಿ ದಿ. ಶಿವಮೂರ್ತಿ ನಾಯ್ಕ್ ಕೆ.ಆರ್. (ಕೆಇಬಿ)ರವರ ಧರ್ಮಪತ್ನಿ

**ಶ್ರೀಮತಿ ಗಂಗಮ್ಮ ಕೆ.ಎಸ್.**

ಇವರು ದಿನಾಂಕ : 17.11.2024ರ ಭಾನವಾರ ಸಂಜೆ 6.15ಕ್ಕೆ ನಿಧನರಾದರು. ಮೃತರಿಗೆ 60 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 18.11.2024ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಜಗಳೂರು ತಾಲ್ಲೂಕು, ಕೊಡದಗುಡ್ಡ ಗ್ರಾಮದಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ : 96202 24439, 63604 48684, 76765 00614**

# ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆನ್‌ಲೈನ್ ನೋಂದಣಿಗೆ ಚಾಲನೆ

ದಾವಣಗೆರೆ, ನ.17- ಸಕ್ಕರೆ ನಾಡು ಮಂಡ್ಯದಲ್ಲಿ ಬರುವ ಡಿಸೆಂಬರ್ 20, 21 ಮತ್ತು 22 ರಂದು ಜರುಗುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ 2024-25 ಸಮ್ಮೇಳನದ ಆನ್ ಲೈನ್ ನೋಂದಣಿಗೆ ಚಾಲನೆ ನೀಡಲಾಗಿದೆ.

ಈ ಬಾರಿ ವಿನೂತನವಾಗಿ ಸಮ್ಮೇಳನದ ನೋಂದಣಿಯನ್ನು ಆನ್ ಲೈನ್ ಮೂಲಕ ಮಾಡಲಾಗುತ್ತಿದ್ದು, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಕೆ.ಆರ್.ಎಸ್. ನ ರಾಯಲ್ ಆರ್ಕಿಡ್‌ನಲ್ಲಿ ಇಂದು ಚಾಲನೆ ನೀಡಿದರು. ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರತಿನಿಧಿ ಯಾಗಿ ಭಾಗವಹಿಸಲು ನೋಂದಣಿಗೆ 600 ರೂ.ಗಳ ಶುಲ್ಕ ನಿಗದಿ ಮಾಡಲಾಗಿರುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ವೆಬ್‌ಸೈಟ್ ನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವ ಪಡೆದಿರುವವರು ನೊಂದಣಿ ಮಾಡಿಕೊಳ್ಳಲು ಇಂದಿನಿಂದ 20 ದಿನಗಳ ಕಾಲ ಅವಕಾಶ ನೀಡಲಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿದ ನಂತರ ಹಣ ಪಾವತಿ ಕೂಡ ಆನ್‌ಲೈನ್ ಮೂಲಕ ಮಾಡಬೇಕಿರುತ್ತದೆ.

ಜಿಲ್ಲಾಧಿಕಾರಿ ಡಾ. ಕುಮಾರ ಮಾತನಾಡಿ,ನೋಂದಣಿಯಾಗುವವರಿಗೆ ಆನ್‌ಲೈನ್ ಮೂಲಕ ವಸತಿ ಒದಗಿಸುವ ಸ್ಥಳ, ವಿಳಾಸ, ನೋಡಲ್ ಅಧಿಕಾರಿಗಳ ಮೊಬೈಲ್ ಸಂಖ್ಯೆ, ಹಾಗೂ ಆನ್‌ಲೈನ್‌ನಲ್ಲೇ ಫೋಟೋ ಸಹಿತ ಗುರುತಿನ ಚೀಟಿ ಒದಗಿಸಲಾಗುವುದು ಎಂದು ಮಾಹಿತಿ ನೀಡಿದರು.

ಆನ್‌ಲೈನ್ ನೋಂದಣಿಗೆ https://kannadasahithyaparishattu.in/sammelana2024/registration ಈ ಲಿಂಕನ್ನು ಬಳಸಬಹುದು.

# ಹಳೇ ಕುಂದುವಾಡದ ಶ್ರೀ ಕರಿಬಸವೇಶ್ವರ ಸ್ವಾಮಿ ಪುಣ್ಯ ಕ್ಷೇತ್ರದಲ್ಲಿ ಇಂದು ದೀಪೋತ್ಸವ

ಹಳೇ ಕುಂದುವಾಡದ ಶ್ರೀ ಕರಿಬಸವೇಶ್ವರ ಸ್ವಾಮಿ ಪುಣ್ಯ ಕ್ಷೇತ್ರದಲ್ಲಿ ಇಂದು ಸಂಜೆ 6 ಗಂಟೆಗೆ ಕಾರ್ತಿಕ ಮಾಸದ ಪ್ರಯುಕ್ತ ಲಕ್ಷ ದೀಪೋತ್ಸವ ಕಾರ್ಯಕ್ರಮ ನಡೆಯಲಿದೆ.

ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಜೆ. ರಾಜಣ್ಣನವರು ಸಾನ್ನಿಧ್ಯ ವಹಿಸಲಿದ್ದಾರೆ. ಟ್ರಸ್ಟ್ ಗೌರವ ಅಧ್ಯಕ್ಷರೂ ಆದ ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದು, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಹುಲ್ಮನಿ ಗಣೇಶ್, ಡಾ. ಹೆಚ್.ಬಿ. ಅರವಿಂದ್ ಸೇರಿದಂತೆ ಇತರೆ ಗಣ್ಯರು ಭಾಗವಹಿಸಲಿದ್ದಾರೆ ಎಂದು ಕಾರ್ಯದರ್ಶಿ ಹೆಚ್.ಕರಿಬಸಪ್ಪ ತಿಳಿಸಿದ್ದಾರೆ.

# ಲಾನ್ ಟೆನಿಸ್ : ಈಶ್ವರಮ್ಮ ಶಾಲಾ ಮಕ್ಕಳು ರಾಷ್ಟ್ರ ಮಟ್ಟಕ್ಕೆ

ದಾವಣಗೆರೆ, ನ. 17 - ಕಲ್ಬುರ್ಗಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ 17 ವರ್ಷದೊಳಗಿನ ಬಾಲಕರ ಲಾನ್ ಟೆನಿಸ್ ಪಂದ್ಯಾವಳಿಯಲ್ಲಿ ನಗರದ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮಕ್ಕಳು ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ರಾಜ್ಯ ಮಟ್ಟದ ಲಾನ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಹತ್ತನೇ ತರಗತಿಯ ಎಂ.ಶ್ರೇಯಾಂತ್, ಶ್ರೀವತ್ಸ ಇನಾಮ್ದಾರ್, ಒಂಬತ್ತನೇ ತರಗತಿಯ ಎಚ್.ತರುಣ್ ಹಾಗೂ ಎಂಟನೇ ತರಗತಿಯ ಎಸ್.ಸೃಜನ್ ಭಾಗವಹಿಸಿದ್ದರು. ವಿಜೇತರಾದ ಎಂ.ಶ್ರೇಯಾಂತ್, ಎಚ್.ತರುಣ್, ಶ್ರೀವತ್ಸ ಇನಾಮ್ದಾರ್ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಸಾಧನೆ ಮಾಡಿದ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ, ಕ್ರೀಡೆಗಳಲ್ಲಿ ಭಾಗವಹಿಸಲು ಮಾರ್ಗದರ್ಶನ ಮಾಡಿದ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಾದ ಕೆ.ರವಿ, ನಾಗರಾಜ ಉತ್ತಂಗಿ, ಎಂ.ಪ್ರಸನ್ನ ಅವರಿಗೆ ಈಶ್ವರಮ್ಮ ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರಾದ ಕೆ.ಆರ್. ಸುಜಾತ ಕೃಷ್ಣ, ಕಾರ್ಯದರ್ಶಿ ಎ. ಆರ್.ಉಷಾ ರಂಗನಾಥ್, ಖಜಾಂಚಿ ಎ.ಪಿ.ಸುಜಾತಾ ಮತ್ತು ಪದಾಧಿಕಾರಿಗಳು, ಪ್ರಾಂಶುಪಾಲ ಕೆ.ಎಸ್. ಪ್ರಭುಕುಮಾರ್, ಉಪಪ್ರಾಂಶುಪಾಲರಾದ ಜಿ.ಎಸ್. ಶಶಿರೇಖಾ ಅಭಿನಂದಿಸಿದ್ದಾರೆ.

# ಮಣಿಪುರ ಸರ್ಕಾರಕ್ಕೆ ನೀಡಿದ ಬೆಂಬಲ ವಾಪಸ್ ಪಡೆದ ಎನ್.ಪಿ.ಪಿ.

ಇಂಫಾಲ್, ನ. 17 – ಮಣಿಪುರದ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ನೀಡುತ್ತಿದ್ದ ಬೆಂಬಲವನ್ನು ಎನ್.ಪಿ.ಪಿ. ವಾಪಸ್ ಪಡೆದಿದೆ. ಎನ್. ಬಿರೇನ್ ಸಿಂಗ್ ಸರ್ಕಾರ ಪರಿಸ್ಥಿತಿ ಬಗೆಹರಿಸಿ ಸಾಮಾನ್ಯ ಸ್ಥಿತಿ ನೆಲೆಗೊಳಿಸಲು ಸಂಪೂರ್ಣ ವಿಫಲವಾಗಿದೆ ಎಂದು ಪಕ್ಷ ಆರೋಪಿಸಿದೆ. 60 ಸದಸ್ಯರ ವಿಧಾನಸಭೆಯಲ್ಲಿ ಎನ್.ಪಿ.ಪಿ. 7 ಸದಸ್ಯರನ್ನು ಹೊಂದಿದೆ. ರಾಜ್ಯದಲ್ಲಿ ಬಿಜೆಪಿ 32 ಸದಸ್ಯರನ್ನು ಹೊಂದಿದೆ.

# ಹಳೇ ಕುಂದುವಾಡದಲ್ಲಿ ಶ್ರೀ ಮೈಲಾರ ಲಿಂಗೇಶ್ವರ ಬೆಳ್ಳಿ ಮೂರ್ತಿ ಪ್ರತಿಷ್ಠಾಪನೆ



ದಾವಣಗೆರೆ, ನ.17 - ನಗರದ ಹಳೇ ಕುಂದುವಾಡ ಶಿಬಾರದಲ್ಲಿ ಶ್ರೀ ಮೈಲಾರಲಿಂಗೇಶ್ವರ ದೇವರ ಬೆಳ್ಳಿ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗಿದೆ. ದೇವಸ್ಥಾನದ ಭಕ್ತ ಮುತ್ತುಲಿಂಗಪ್ಪರ ಎಂ.ಡಿ. ಬಸವರಾಜ್ ಹಾಗೂ ಕುಟುಂಬದವರು ಬೆಳ್ಳಿ ಮೂರ್ತಿ ಸಮರ್ಪಣೆ ಮಾಡಿದ್ದಾರೆ. ದೇವರ ಹರಕೆ ಹಿನ್ನೆಲೆಯಲ್ಲಿ ಗೌರಿ ಹುಣ್ಣಿಮೆಯ ದಿನದಂದು ಬೆಳ್ಳಿ ಮೂರ್ತಿಯನ್ನು ಎಂ.ಡಿ. ಬಸವರಾಜ್ ದಂಪತಿ ಹಾಗೂ ಮುತ್ತುಲಿಂಗಪ್ಪರ ಕುಟುಂಬಸ್ಥರು ಮೈಲಾರ ದೇವಸ್ಥಾನ ಕಮಿಟಿಗೆ ಸಮರ್ಪಣೆ ಮಾಡಿದ್ದು, ಬಳಿಕ ಬೆಳ್ಳಿ ಮೂರ್ತಿ ಪ್ರತಿಷ್ಠಾಪನೆ ಮಾಡಿ ಡಮರುಗ, ದೋಣಿ ಸಮೇತ ಎಡೆ ಇರಿಸಿ ಅಭಿಷೇಕ, ವಿಶೇಷ ಪೂಜೆ ನೆರವೇರಿಸಲಾಗಿದೆ, ನಂತರ ಅನ್ನ ಸಂತರ್ಪಣೆ ನಡೆಯಿತು.

# ಕೊಟ್ಟೂರೇಶ್ವರ ದೇವಸ್ಥಾನದ ಹುಂಡಿ ಎಣಿಕೆಯಲ್ಲಿ 65,63,795 ರೂ.



ಕೊಟ್ಟೂರು, ನ.17 - ಪಟ್ಟಣದ ಆರಾಧ್ಯ ದೈವ ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನದ ಹುಂಡಿ ಎಣಿಕೆ ಶನಿವಾರ ನಡೆಯಿತು. ಹುಂಡಿಯಲ್ಲಿ ಒಟ್ಟು 65,63,795 ರೂ. ಸಂಗ್ರಹವಾಗಿದೆ ಎಂದು ಸಹಾಯಕ ಆಯುಕ್ತರು ತಿಳಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನದ ಪ್ರಧಾನ ಧರ್ಮಕರ್ತರಾದ ಎಂ ಕೆ ಶೇಖರಯ್ಯ, ಮುಜರಾಯಿ ಇಲಾಖೆಯ ಸಹಾಯಕ ಆಯುಕ್ತ ಹೆಚ್. ಗಂಗಾಧರಪ್ಪ, ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ, ಕರ್ನಾಟಕ ಪ್ರಗತಿ ಗ್ರಾಮೀಣ ಬ್ಯಾಂಕ್ ಮ್ಯಾನೇಜರ್ ಸುಧೀರ್ ಕುಮಾರ್, ಪೊಲೀಸ್ ಸಿಬ್ಬಂದಿ ಕಲ್ಲೇಶ್, ಕನ್ನಿಹಳ್ಳಿ ಗುರುಬಸವರಾಜ್, ನಾಗರಾಜ್, ಪ್ರೇಮಾನಂದ ಗೌಡ ಕಟ್ಟೆಮನಿ ಮತ್ತಿತರರು ಉಪಸ್ಥಿತರಿದ್ದರು.

# ಗರಡಿ ಮನೆಗಳಿಗೆ 1 ಕೋಟಿ ಅನುದಾನ

## ಶೀಘ್ರ ಕಾರ್ಯಾರಂಭ: ಶಾಸಕ ಪ್ರಕಾಶ ಕೋಳಿವಾಡ



ರಾಣೇಬೆನ್ನೂರು, ನ.17- ದೇಶೀಯ ಕ್ರೀಡೆ ಅದರಲ್ಲೂ ಕುಸ್ತಿಗೆ ಅತೀ ಹೆಚ್ಚು ಆಸಕ್ತಿ ಹೊಂದಿದ್ದ ನಮ್ಮ ಹಿರಿಯರು ಬಹಳಷ್ಟು ಆರೋಗ್ಯವಂತರಾಗಿದ್ದರು ಎಂದು ಶಾಸಕ ಪ್ರಕಾಶ ಕೋಳಿವಾಡ ತಿಳಿಸಿದರು. ಜೊತೆಗೆ ಕುಸ್ತಿಪಟುಗಳೂ ಮೈಸೂರು ಮಹಾರಾಜರಿಂದ ಸನ್ಮಾನಿತ ರಾಗಿದ್ದರು. ಆ ದಿಶೆಯಲ್ಲಿ ಇಂದಿನ ನಮ್ಮ ಯುವ ಸಮುದಾಯ ಶಿಕ್ಷಣದ ಜೊತೆಗೆ ಆರೋಗ್ಯಕರ ಕ್ರೀಡೆಗಳಲ್ಲೂ ಆಸಕ್ತಿ ವಹಿಸಲಿ ಎಂದು ಅವರು ಸಲಹೆ ನೀಡಿದರು.

ರಾಣೇಬೆನ್ನೂರು ನಗರ ಹಾಗೂ ಮೆಡ್ಲೇರಿಗಳಲ್ಲಿ ಗರಡಿ ಮನೆಗಳ ನಿರ್ಮಾಣಕ್ಕೆ ನನ್ನ ಅನುದಾನದಲ್ಲಿ ಒಂದು ಕೋಟಿ ಹಣ ನೀಡಿದ್ದೇನೆ. ಶೀಘ್ರದಲ್ಲಿಯೇ ಕಾರ್ಯಾರಂಭವಾಗಲಿದೆ ಎಂದು ಶಾಸಕ ಪ್ರಕಾಶ ಕೋಳಿವಾಡ ಇಂದು ನಡೆದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ತಿಳಿಸಿದರು.

# ಮಲೇಬೆನ್ನೂರಿನಲ್ಲಿ ಇಂದು ಸಹಕಾರ ಸಪ್ತಾಹ

ಶ್ರೀ ವೀರಶೈವ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 11.30ಕ್ಕೆ ಹರಿಹರ ತಾಲ್ಲೂಕಿನ ವಿವಿಧ ರೀತಿಯ ಎಲ್ಲಾ ಸಹಕಾರ ಸಂಘಗಳ-ಬ್ಯಾಂಕುಗಳ ಸಂಯುಕ್ತ ಆಸ್ರಯದಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾ. ಪಿಎಸಿಎಸ್ ನೌಕರರ ಒಕ್ಕೂಟದ ಅಧ್ಯಕ್ಷ ಜಿವಿ. ಕುಮಾರ್ ನಿಟ್ಟೂರು ತಿಪ್ಪೇಶಿ, ಜಿಗಳಿಯ ಎನ್.ಎನ್. ತಳವಾರ್ ಯಲವಟ್ಟಿ ಶೇಖರಪ್ಪ ತಿಳಿಸಿದ್ದಾರೆ.

ಉದ್ಘಾಟನೆ : ಬಿ.ಪಿ. ಹರೀಶ್ ನೆರವೇರಿಸಲಿದ್ದು, ಹನಗವಾಡಿ ಕುಮಾರ್ ಅಧ್ಯಕ್ಷತೆ ವಹಿಸಿಲಿದ್ದಾರೆ. ಡಾ. ಎ.ಬಿ. ರಾಮಚಂದ್ರಪ್ಪ ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು ವಿಷಯದ ಬಗ್ಗೆ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಡಾ.ಪ್ರಭಾ ಮಲ್ಲಿಕಾರ್ಜುನ್, ಹೆಚ್.ಎಸ್. ಶಿವಶಂಕರ್, ಎಸ್. ರಾಮಪ್ಪ, ಜಗದೀಶಪ್ಪ ಬಣಕಾರ್, ಡಾ. ಜೆ.ಆರ್. ಷಣ್ಮುಖಪ್ಪ, ಜಿ.ಎನ್. ಸ್ವಾಮಿ, ಕೋಗುಂಡಿ ಬಕ್ಕೇಶಪ್ಪ, ಸಿರಿಗೆರೆ ರಾಜಣ್ಣ, ನಂದಿಗಾವಿ ಶ್ರೀನಿವಾಸ್, ಪಿಎಸ್. ಹನುಮಂತಪ್ಪ, ಸಿರಿಗೆರೆ ಹಾಲೇಶಪ್ಪ, ಜಿಗಳಿ ಆನಂದಪ್ಪ, ಬೆಳ್ಳೂಡಿ ರಾಮಚಂದ್ರಪ್ಪ, ಹಾಲಿವಾಣ ಪರಮೇಶ್ವರಪ್ಪ, ಎನ್. ಕುಮಾರ್ ಮತ್ತಿತರರು ಇದ್ದರು.

# ವಿಜೃಂಭಿಸುತ್ತಿರುವ ಕುಟುಂಬ ರಾಜಕಾರಣ

(1ನೇ ಪುಟದಿಂದ) ರಾಜ್ಯದಲ್ಲಿ ಕ್ರಾಂತಿ ಉಂಟು ಮಾಡುವುದು ನಿಶ್ಚಿತವಾದರೂ. ದಿಢೀರ್ ಬದಲಾಗುತ್ತದೆ ಎಂದು ಹೇಳಲಾಗದು. ಬಹಳಷ್ಟು ಸಮಯಾವಕಾಶ ಬೇಕು. ಮುಂಬರುವ ದಿನಗಳಲ್ಲಿ ಸ್ವಾಭಿಮಾನಿ ಬಳಗ ಎತ್ತರಕ್ಕೆ ಬೆಳೆಯಬಲ್ಲುದು ಎಂಬ ವಿಶ್ವಾಸ ನನ್ನದು ಎಂದು ಹೇಳಿದರು.

ಇಡಿ ರಾಜ್ಯವನ್ನೇ ಸುತ್ತಲು ಆರಂಭಿಸಿದ್ದೇನೆ. ಹೋದ ಕಡೆಗಳಲ್ಲಿ ಪ್ರೀತಿ, ವಿಶ್ವಾಸ ಸಿಗುತ್ತಿದ್ದು, ನಾವಷ್ಟೇ ಮೌಲ್ಯವನ್ನು ಹೆಚ್ಚಿಸಿಕೊಳ್ಳುವುದಲ್ಲ. ಬದಲಿಗೆ ನಮ್ಮ ಜೊತೆಯಲ್ಲಿರುವವರ ಮೌಲ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಶ್ರಮಿಸುವುದಾಗಿ ಭರವಸೆ ನೀಡಿದರು.

ರಾಜ್ಯದಲ್ಲೆಡೆ ಸಂಚರಿಸುವ ಶಕ್ತಿ, ಜನಪರ ಕಾಳಜಿ, ಶೈಕ್ಷಣಿಕ ಅಸಮಾನತೆ ತೊಲಗಿಸುವ ಹಂಬಲ ಇದೆ. ಹಿಂದುಳಿದ ವರು, ದಲಿತರು, ಅಲ್ಪಸಂಖ್ಯಾತರು, ಶೋಷಿತರ ಪರ ಸ್ವಾಭಿಮಾನಿ ಬಳಗ ಕೆಲಸ ಮಾಡಲಿದೆ ಎಂದು ಹೇಳಿದರು.

ಲೋಕಸಭೆ ಚುನಾವಣೆಯಲ್ಲಿ ಸೋತ ಬಳಿಕ ಮನೆಯಲ್ಲಿ ಕೂರದೇ ಸಂಘಟನೆ ಮಾಡುವ ಮತ್ತು ಎಲ್ಲಾ ವರ್ಗದವರ ನೋವಿಗೆ ಸ್ಪಂದಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಾ ಬಂದಿದ್ದೇನೆ. ಮುಂದೆ ಕೂಡ ಸದುದ್ದೇಶದಿಂದ ಮುನ್ನಡೆಯುತ್ತೇನೆಂದು ತಿಳಿಸಿದರು.

ಲೋಕಸಭೆ ಚುನಾವಣೆಯ ವೇಳೆ ನನ್ನ ವಿರುದ್ಧ ಅಪಪ್ರಚಾರ, ಸುಳ್ಳು ಸುದ್ದಿಗಳನ್ನೇ ಸೃಷ್ಟಿಸಿದರು. ಆದರೂ ನಾನು ಮುಂದೆ ಇಟ್ಟ ಹೆಜ್ಜೆ ಹಿಂದಕ್ಕೆ ಇಡಲಿಲ್ಲ. ದಾವಣಗೆರೆಯಲ್ಲಿ ಪಾದಯಾತ್ರೆ ನಡೆಸಿದಾಗ ಹೆಚ್ಚು ದಿನ ಇರಲ್ಲ, ಇಲ್ಲಿಂದ ಹೋಗುತ್ತೇನೆಂದು ಭಾವಿಸಿದವರು, ಕುಹುಕವಾಡಿದವರೇ ಹೆಚ್ಚು. ಹೊಂದಾಣಿಕೆ ಮಾಡಿಕೊಳ್ಳುವ ವ್ಯಕ್ತಿ ನಾನಲ್ಲ. ಲಕ್ಷಾಂತರ ಮಂದಿ ಹತ್ತು ತಿಂಗಳಲ್ಲಿ ಬಂದರು. ಚುನಾವಣೆ ಹತ್ತಿರ ಬರುತ್ತಿದ್ದಂತೆ ಯಾವ್ಯಾವುದೋ ಕಾರಣಕ್ಕೆ ಹಿಂದೆ ಸರಿದರು. ಸ್ವಾಭಿಮಾನಿಗಳು, ಪ್ರಾಮಾಣಿಕತೆ ಇದ್ದವರು ಜೊತೆಯಲ್ಲೇ ಉಳಿದರು. 42097 ಮತಗಳು ಬಂದವು. ನಿರೀಕ್ಷೆಗೆ ತಕ್ಕಂತೆ ಮತಗಳು ಬಾರದಿರುವುದು ನನಗಷ್ಟೇ ಅಲ್ಲ, ಜಿಲ್ಲೆಯ ಜನರಿಗೂ ಬೇಸರ ತರಿಸಿತು ಎಂದು ಹೇಳಿದರು.

ಈಗಿನ ರಾಜಕಾರಣಿಗಳು ಮತ ಬ್ಯಾಂಕ್ ಮೇಲೆ ಕಣ್ಣಿಟ್ಟಿರುತ್ತಾರೆ. ಶೋಷಣೆ ಮಾಡುತ್ತಲೇ, ಮತ ಪಡೆಯುತ್ತಾ ತಾವು ಬೆಳೆದು ಅಧಿಕಾರ, ಶ್ರೀಮಂತಿಕೆ ಅನುಭವಿಸು ತ್ತಾರೆ. ಚುನಾವಣೆಯಲ್ಲಿ ಗೆಲ್ಲಲು ನೂರು, ಇನ್ನೂರು ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಆದ್ರೆ, ಶೋಷಿತರು, ನೊಂದವರು, ಬಡವರ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲ್ಲ, ಪ್ರೋತ್ಸಾಹ ಕೊಡುವುದಿಲ್ಲ. ಶಿಕ್ಷಿತರಾದರೆ ಮುಂದೆ ಪ್ರಶ್ನೆ ಮಾಡುತ್ತಾರೆ, ನಮ್ಮ ಮಟ್ಟಕ್ಕೆ ಬೆಳೆದುಬಿಡುತ್ತಾರೆ ಎಂಬ ಭಯ ಈಗಿನ ರಾಜಕಾರಣಿಗಳಲ್ಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜನರ ಅಸಹಾಯಕತೆ ರಾಜಕಾರಣಿಗಳ ಬಂಡವಾಳವಾಗಿಬಿಟ್ಟಿದೆ. ನಾವು ಅಸಹಾಯಕತೆ ಬಿಡಬೇಕು. ಏನೂ ಮಾಡದೇ ಇರುವ ಪರಿಸ್ಥಿತಿ ಬಂದಿದೆ ಎಂದು ಕೈಕಟ್ಟಿ ಕೂರಬಾರದು. ಯಾಕೆಂದರೆ ನಮ್ಮ ಈ ಧೋರಣೆಯೇ ಬಂಡವಾಳವಾಗಿ ಬಿಟ್ಟಿದೆ. ಸಂಘಟನೆ, ಹೋರಾಟದ ಮನಸ್ಥಿತಿ ಬೆಳೆಸಿಕೊಳ್ಳಬೇಕು. ಇದಕ್ಕೆ ಸ್ವಾಭಿಮಾನಿ ಬಳಗ ವೇದಿಕೆ ಕಲ್ಪಿಸಿ ಕೊಡಲಿದೆ. ಪರಿಣಾಮಕಾರಿಯಾಗಿ ರಾಜಕೀಯ ಪ್ರಜ್ಞೆ ಮೂಡಿಸುತ್ತೇವೆ. ಯಾರ ಹಂಗಿನಲ್ಲಿ ಬದುಕದಿರುವವರು ಸ್ವಾಭಿಮಾನಿಗಳು. ಸ್ವಾರ್ಥ ಇಲ್ಲದವರಿಗೆ ಧೈರ್ಯ, ಹೋರಾಡುವ ಮನೋಭಾವ ಇರುತ್ತದೆ ಎಂದು ವಿಶ್ಲೇಷಿಸಿದರು.

ತುಳಸಿ ಗಿಡಕ್ಕೆ ನೀರೆರೆಯುವ ಮೂಲಕ ವಿಶೇಷವಾಗಿ ಸ್ವಾಭಿಮಾನಿ ಬಳಗ ಉದ್ಘಾಟಿಸಲಾಯಿತು. ರಾಜು ಮೌರ್ಯ ಪ್ರಾಸ್ತಾವಿಕವಾಗಿ ಸ್ವಾಭಿಮಾನಿ ಬಳಗದ ಧ್ಯೇಯೋದ್ದೇಶಗಳ ಕುರಿತಂತೆ ಮಾಹಿತಿ ನೀಡಿದರು.

ಹಿರಿಯ ಪತ್ರಕರ್ತ ಬಸವರಾಜ್ ದೊಡ್ಮನಿ ವೆಬ್ ಸೈಟ್ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ವೇದಿಕೆಯಲ್ಲಿ ತಂಜೀಮ್ ಉಲೇಮಾ ಅಹಲೇ ಸುನ್ನತ್ ಅಧ್ಯಕ್ಷ ಮೌಲಾನಾ ಖಾಜಿ ಮಹಮ್ಮದ್ ಇಲಿಯಾಜ್ ಖಾದ್ರಿ, ಬಾಸ್ಕೋ ಡಾನ್ ನ ಫಾದರ್ ರೆಜಿ ಜೇಕಬ್ ಇದ್ದರು.

ಇದೇ ವೇಳೆ ಮಹರ್ಷಿ ವಾಲ್ಮೀಕಿ, ವೀರವನಿತೆ ಒನಕೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮ, ಭಕ್ತಕನಕದಾಸರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಯುಗಧರ್ಮ ರಾಮಣ್ಣ (ಜಾನಪದ), ಕೊಕ್ಕನೂರು ಎ.ಕೆ. ಹನುಮಂತಪ್ಪ (ತಮಟೆ ವಾದ್ಯ ಕಲಾವಿದ), ಇಂಟರ್ ನ್ಯಾಷನಲ್ ಗಿನ್ನಿಸ್ ಬುಕ್ ರೆಕಾರ್ಡ್ ಸಾಧಕಿ ಕು. ಎಸ್. ಸ್ತುತಿ, ಶವ ಸಂಸ್ಕಾರ ಕಾಯಕ ಯೋಗಿ ಗೂಳಪ್ಪ ನೀಲಪ್ಪ ಮುಗದೂರ, ಪ್ರಗತಿಪರ ರೈತರಾದ ಕೆ. ಟಿ. ಚಂದ್ರಶೇಖರ್, ಯೋಗಪಟು ಕು. ಕೆ. ವೈ. ಸೃಷ್ಟಿ, ಕರಾಟೆ ಪಟು ನಿಧಿ ಬಿ. ಎ. ಬೇತೂರು, ಕಟ್ಟಡ ಕಾರ್ಮಿಕ ಫೆಡರೇಷನ್ ಅಧ್ಯಕ್ಷ ವಿ. ಲಕ್ಷ್ಮಣ್, ಅಂಗವಿಕಲರ ಆಶಾಕಿರಣ ಟ್ರಸ್ಟ್ ಮುಖ್ಯ ಶಿಕ್ಷಕ ಸಿ. ಹನುಮೇಶ್ ರವರಿಗೆ ಸ್ವಾಭಿಮಾನಿ ಬಳಗದಿಂದ ಗೌರವಿಸಲಾಯಿತು.



## ದಾವಣಗೆರೆ ಹಳೆ ಊರಿನ ಗೌರಿ ಆರತಿಯ ಸ್ವಾರಸ್ಯಗಳು...

# 'ಎದ್ದು ಬಾರ, ನಿನ ಕರೆಯಲು ಬಂದೆ'...

**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

ಕಾರ್ತಿಕ ಗೌರಿ ಆರತಿಯ ಹಾಡುಗಳಲ್ಲಿ ತುಂಬಾ ಸ್ವಾರಸ್ಯಕರವಾದ ಹಾಡು ಎಂದರೆ ಇದು. ಕೇವಲ ಎಂಟು ದಿನಗಳಷ್ಟೇ ತವರು ಮನೆಯಲ್ಲಿ ಇರುತ್ತೇನೆಂದು ಆಶ್ವಯುಜ ಶೀಗಿ ಹುಣ್ಣಿಮೆಗೆ ಬಂದ ಗೌರಿಯು ಕಾರ್ತಿಕ ಹುಣ್ಣಿಮೆಯಾದರೂ ಕೈಲಾಸಕ್ಕೆ ವಾಪಸ್ ಬಾರದಿದ್ದುದನ್ನು ಕಂಡು ಸಾಕ್ಷಾತ್ ಶಿವನೇ ಆಕೆಯನ್ನು ಕರೆಯಲು ಬಂದಾಗ ಗೌರಿಯು ತಾನು ಬರುವುದಿಲ್ಲ ಎಂಬುದಕ್ಕೆ ಕಾರಣವನ್ನು ಕೊಡುತ್ತಾಳೆ !!. ರಾಗಿ ರೊಟ್ಟಿ ರಾಜಗಿರಿ ಸೊಪ್ಪಿನ ಪಲ್ಯವನ್ನು ಕೊಟ್ಟರೆ, ಸಜ್ಜೆ ರೊಟ್ಟಿ ಹಾಕರಕಿ ಸೊಪ್ಪಿನ ಪಲ್ಯವನ್ನು ಕೊಟ್ಟರೆ ನಮ್ಮ ತವರವರನ್ನು ಬಡವರು ಎಂದು ದೂರಿದಿ.

ಸಣ್ಣ ಶಾವಿಗೆ ಬಸೆದು ನಾನು ನೀಡಿದರೆ ಸವತಿ ಗಂಗೆಯನ್ನು ಕರೆದು ಸಕ್ಕರೆ ಕೇಳಿದಿ. ಹೂರಣದ ಕರಿಗಡಬು ನಾನು ನೀಡಿದರೆ ಗಂಗೆಯನ್ನು ಕರೆದು ತುಪ್ಪ ಕೇಳಿದಿ. ನಾನು ಮಂಚ ಹಾಸಿದರೆ ಗಂಗೆಯ ಕೂಡ ಮಂಚಕ್ಕೆ ಏರಿದಿ ಎಂದೆಲ್ಲ ಗೌರಿ ದೂರಿದಾಗ ಶಿವನು ತಪ್ಪಾಯ್ತು, ನನ್ನ ಅರ್ಧಾಂಗಿ ನೀನು, ಎದ್ದು ಬಾ ಎಂದು ಗೋಗರೆಯುವ ಗೌರಿ ಆರತಿಯ ಈ



ಹಾಡು ಅತ್ಯಂತ ಸ್ವಾರಸ್ಯಕರವಾಗಿದೆ.

'ಶಿವನೂ ಗೌರಿಯ ಕರೆಯಲು ಬಂದು ಸರ್ವರೇನಂದಾರಾ.. ಸರ್ವರೇನಂದಾರಾ, ಎಂಟ ದಿನ ಇದ್ದು ಬರತೇನಂದ ಇಲ್ಲೇ ಕುಂತೆಲ್ಲ, ಎದ್ದು ಬಾರ.. ಎದ್ದು ಬಾರ.. ನಿನ ಕರೆಯಲು ಬಂದೆ, ಯಾಹೊತ್ತ ಆತಲ್ಲ. ರಾಗಿಯ ರೊಟ್ಟಿ ರಾಜಗಿರಿ ಪಲ್ಲೇವ, ಈ ರಾಜ್ಯಕ್ಕೆ ನಮ್ಮವರು ಬಡವರಂದೆಲ್ಲ, ವಲ್ಲೊಗ ವಲ್ಲೇನ್ ಹೋಗ ನಾ ಬರುವುದಿಲ್ಲ ವಲ್ಲೇನ್ ಹೋಗ ನಾ ಬರುವುದಿಲ್ಲ. ಸಜ್ಜೆಯ ರೊಟ್ಟಿ ಹಾಕರಕಿ ಪಲ್ಲೇವು, ಈ ದಿಕ್ಕಿಗೆ ನಮ್ಮವರು ಬಡವರಂದೆಲ್ಲ, ವಲ್ಲೊಗ ವಲ್ಲೇನ್ ಹೋಗ ನಾ ಬರುವುದಿಲ್ಲ, ವಲ್ಲೇನ್ನೊಗ ನಾ ಬರುವುದಿಲ್ಲ. ಸಣ್ಣನ ಶಾವಿಗಿ ಬಸ ಬಸದ ನೀಡಿದರ, ಬಸ ಬಸದ ನೀಡಿದರ ಆ ಸಣ್ಣ ಸಿರಿಗಂಗಿ ಕರೆದು ಸಕ್ಕರಿ ಕೇಳಿದ್ವಿ, ವಲ್ಲೊಗ ವಲ್ಲೇನ್ ಹೋಗ ನಾ ಬರುವುದಿಲ್ಲ, ನಾ ಬರುವುದಿಲ್ಲ. ಹೂರಣದ ಕರಿಗಡಬ ಕರ ಕರದು ನೀಡಿದರ ಕರ ಕರದು ನೀಡಿದರ ಆ ಸಣ್ಣ ಸಿರಿಗಂಗಿ ಕರೆದು ತುಪ್ಪ ಬೇಕಂದಿ, ವಲ್ಲೊಗ ವಲ್ಲೇನ ಹೋಗ ನಾ ಬರುವುದಿಲ್ಲ ನಾ ಬರುವುದಿಲ್ಲ. ಮಂಚಾವ ಹಾಸಿದ್ದೆ ಮಲ್ಲಿಗಿ ಸೊಸಿದ್ದೆ, ಆ ಸಣ್ಣ ಸಿರಿಗಂಗಿ ಕರೆದು ಮಂಚಕ್ಕೇರಿದ್ದಿ. ವಲ್ಲೊಗ ವಲ್ಲೇನ ಹೋಗ ನಾ ಬರುವುದಿಲ್ಲ ನಾ ಬರುವುದಿಲ್ಲ. ಅಂದಿದ್ದೆಲ್ಲಾ ಸರ್ವತಪ್ಪು ಆಡಿದ್ದೆಲ್ಲ ಸರ್ವತಪ್ಪು ನನ ಅರ್ಧ ಭಾಗ ನೀನ ಅಂದೆ, ಎದ್ದು ಬಾ ಅಂದೇನಲ್ಲ ಎದ್ದು ಬಾರ ಎದ್ದು ಬಾರ ನಿನ್ನ ಕರೆಯಲು ಬಂದೆ ಯಾಹೊತ್ತಾತಲ್ಲ......'

# ಕಲ್ಯಾಣದಿಂದ ಆರಂಭವಾಗಿ ಕಟೇಂಗೆವರೆಗೆ

## ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ನೇಪಥ್ಯಕ್ಕೆ ಸರಿದ ಜನರ ಸಮಸ್ಯೆಗಳು

ಮುಂಬೈ, ನ. 17 – ಜನ ಕಲ್ಯಾಣ ಹಾಗೂ ಅಭಿವೃದ್ಧಿ ವಿಷಯಗಳ ಚರ್ಚೆಗಳೊಂದಿಗೆ ಆರಂಭವಾದ ಮಹಾರಾಷ್ಟ್ರ ವಿಧಾನಸಭಾ ಚುನಾವಣಾ ಪ್ರಚಾರ, ಅಂತಿಮ ಘಟ್ಟದಲ್ಲಿ ವೋಟ್ ಜಿಹಾದ್, ಧರ್ಮಯುದ್ಧದಂತಹ ಚರ್ಚೆಗಳಿಗೆ ಬಂದು ನಿಂತಿದೆ.

ಸೋಮವಾರ ವಿಧಾನಸಭಾ ಚುನಾವಣಾ ಪ್ರಚಾರಕ್ಕೆ ತೆರೆ ಬೀಳಲಿದೆ. ಈ ಹಿಂದಿನ ಕೆಲ ಚುನಾವಣೆಗಳ ರೀತಿಯಲ್ಲೇ, ಈ ಬಾರಿಯೂ ಪ್ರತಿಪಕ್ಷಗಳು ಸಂವಿಧಾನ ಅಪಾಯದಲ್ಲಿದೆ ಎಂಬ ಸಂದೇಶ ನೀಡಿದವು.

ಅಜಿತ್ ಪವಾರ್ ಹಾಗೂ ಏಕನಾಥ ಶಿಂಧೆ ಅವರು ತಮ್ಮ ಪಕ್ಷಗಳಿಗೆ ದ್ರೋಹ ಎಸಗಿದ್ದಾರೆ ಎಂದು ಎನ್.ಸಿ.ಪಿ. (ಎಸ್.ಪಿ.) ಅಧ್ಯಕ್ಷ ಶರದ್ ಪವಾರ್ ಹಾಗೂ ಶಿವಸೇನೆ (ಯು.ಬಿ.ಟಿ.) ಅಧ್ಯಕ್ಷ ಉದ್ಧವ್ ಠಾಕ್ರೆ ಅವರು ಭಾವನಾತ್ಮಕವಾಗಿ ಮಾತನಾಡಿದ್ದಾರೆ.

ಮುಖ್ಯಮಂತ್ರಿ ಶಿಂಧೆ ನೇತೃತ್ವದ ಶಿವಸೇನೆ, ಬಿಜೆಪಿ ಹಾಗೂ ಅಜಿತ್ ಪವಾರ್ ನೇತೃತ್ವದ ಎನ್.ಸಿ.ಪಿ. ಪಕ್ಷಗಳನ್ನು ಒಳಗೊಂಡ ಮಹಾಯುತಿ ಸರ್ಕಾರವು ಲಡ್ಕಿ ಬಹಿನ್ ಯೋಜನೆಯ ಕುರಿತು ದೊಡ್ಡ ಮಟ್ಟದಲ್ಲಿ ಪ್ರಚಾರ ನಡೆಸಿವೆ. ನವೆಂಬರ್ 20ರಂದು ಮತದಾನ ನಡೆಯಲಿದೆ.

ಈ ಹಿಂದೆ ಉದ್ಧವ್ ಠಾಕ್ರೆ ನೇತೃತ್ವದ ಎಂ.ವಿ.ಎ. ಸರ್ಕಾರ ಎರಡೂವರೆ ವರ್ಷಗಳ ಕಾಲ ಆಡಳಿತ ನಡೆಸಿತ್ತು. ನಂತರ ಶಿಂದೆ ನೇತೃತ್ವದ ಶಿವಸೇನೆ ಬಣ ಸಿಡಿದೆದ್ದ ನಂತರ ಸರ್ಕಾರ ಪತನವಾಗಿತ್ತು. ನಂತರ ಅಜಿತ್ ಪವಾರ್ ನೇತೃತ್ವದಲ್ಲಿ ಎನ್.ಸಿ.ಪಿ.ಯ ಹಲವು ಶಾಸಕರು ಬಂಡಾಯ ಎದ್ದು ಮಹಾಯುತಿ ಸರ್ಕಾರ ಸೇರಿದ್ದರು.

ಶಿಂದೆ ಹಾಗೂ ಅಜಿತ್ ಪವಾರ್ ನೇತೃತ್ವದ ಬಣಗಳೇ ನಿಜವಾದ ಶಿವಸೇನೆ ಹಾಗೂ ಎನ್.ಸಿ.ಪಿ. ಎಂದು ಚುನಾವಣಾ ಆಯೋಗದ ಆದೇಶದಲ್ಲಿ ತಿಳಿಸಲಾಗಿತ್ತು.

ಶಿಂಧೆ ಹಾಗೂ ಅಜಿತ್ ಪವಾರ್ ಅವರು ದ್ರೋಹ ಎಸಗಿದ್ದಾರೆ ಎಂಬ ಅಂಶ ಚುನಾವಣೆಯಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಲಾಗಿತ್ತು. ಈ ದ್ರೋಹಿಗಳನ್ನು ಪರಾಭವಗೊಳಿಸುವಂತೆ ಠಾಕ್ರೆ ಕರೆ ನೀಡಿದ್ದರು.

84 ವರ್ಷದ ಶರದ್ ಪವಾರ್ ಚುನಾವಣಾ ಪ್ರಚಾರದಲ್ಲಿ ಪ್ರಮುಖವಾಗಿ ಪಾಲ್ಗೊಂಡಿದ್ದಾರೆ. ಒಂದು ಕಾಲದಲ್ಲಿ ತಮ್ಮ ಜೊತೆಗಾರರಾಗಿದ್ದ ಛಗನ್ ಭುಜ್ಬಲ್ ಹಾಗೂ ದಿಪೀಲ್ ವಾಲ್ಸೆ – ಪಾಟೀಲ್ ಕ್ಷೇತ್ರಗಳ ಕಡೆ ಹೆಚ್ಚು ಗಮನ ಹರಿಸಿದ್ದಾರೆ.

ಅಜಿತ್ ಪವಾರ್ ಹಾಗೂ ಎನ್.ಸಿ.ಪಿ. (ಎಸ್.ಪಿ.) ಅಭ್ಯರ್ಥಿ ಯುಗೇಂದ್ರ ಪವಾರ್ ನಡುವೆ ಸಂಘರ್ಷ ನಡೆಯುತ್ತಿರುವ ಬಾರಾಮತಿ ಕ್ಷೇತ್ರದಲ್ಲಿ ಸೋಮವಾರ ಪವಾರ್ ಪ್ರಚಾರ ಸಮಾವೇಶ ನಡೆಸಲಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಶಿಂಧೆ ನೇತೃತ್ವದ ಮಹಾಯುತಿ ತೀವ್ರ ಮುಖಭಂಗಕ್ಕೆ ಗುರಿಯಾಗಿತ್ತು. ನಂತರ ಮುಖ್ಯಮಂತ್ರಿ ಲಡ್ಕಿ ಬಹಿನ್ ಯೋಜನೆ ಜಾರಿಗೆ ತಂದು, ಮಹಿಳೆಯರಿಗೆ ಪ್ರತಿ ತಿಂಗಳು 1,500 ರೂ. ನೀಡಲಾಗುತ್ತಿದೆ.

ರಾಜ್ಯದ 2.3 ಕೋಟಿ ಮಹಿಳೆಯರು ಸರ್ಕಾರದ ಯೋಜನೆಗಳಿಂದ ತಿಂಗಳಿಗೆ 7,500 ರೂ.ಗಳವರೆಗೆ ನೆರವು ಪಡೆಯುತ್ತಿದ್ದಾರೆ ಎಂದು ಸರ್ಕಾರಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಚುನಾವಣಾ ವೇಳೆಯಲ್ಲಿ ಬಟೇಂಗೆ ತೊ ಕಟೇಂಗೆ (ಒಡೆದರೆ ಕುಸಿಯುತ್ತೇವೆ), ಏಕ್ ಹೈ ತೋ ಸೇಫ್ ಹೈ (ಒಂದಾಗಿದ್ದರೆ ಸುರಕ್ಷತೆ), ವೋಟ್ ಜಿಹಾದ್ ಹಾಗೂ ಧರ್ಮಯುದ್ಧದ ರೀತಿಯ ಭಾವನಾತ್ಮಕ ಘೋಷಣೆಗಳೂ ಕೇಳಿ ಬಂದವು. ಬಿಜೆಪಿ ನಾಯಕರಾದ ಪಂಕಜ ಮುಂಡೆ ಹಾಗೂ ಅಶೋಕ್ ಚವಾಣ್ ಅವರು ಈ ಘೋಷಣೆಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು.

ಈ ನಡುವೆ, ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜರಂಗೆ ಪಾಟೀಲ್ ಅವರು ರಾಜ್ಯಾದ್ಯಂತ ಸಭೆಗಳನ್ನು ನಡೆಸುತ್ತಿದ್ದಾರೆ. ಮರಾಠ ಮೀಸಲಾತಿ ವಿರೋಧಿಸುತ್ತಿರುವವರನ್ನು ಸೋಲಿಸುವಂತೆ ಕರೆ ನೀಡಿದ್ದಾರೆ.

ಚುನಾವಣಾ ಪ್ರಚಾರದ ಅಬ್ಬರದಲ್ಲಿ ಉದ್ಯೋಗ ಸೃಷ್ಟಿ, ಹೂಡಿಕೆ, ರೈತರ ವಲಸೆ, ಏರುತ್ತಿರುವ ಆರೋಗ್ಯ ವೆಚ್ಚ ಹಾಗೂ ಶಿಕ್ಷಣಗಳಂತಹ ವಿಷಯಗಳು ನೇಪಥ್ಯಕ್ಕೆ ಸರಿದಿವೆ.

ಮಹಾರಾಷ್ಟ್ರದ ಗ್ರಾಮೀಣ ಭಾಗದಲ್ಲಿ ಕೃಷಿ ಸಂಕಷ್ಟವಿದೆ. ಸೋಯಾಬೀನ್ ಹಾಗೂ ಹತ್ತಿಯ ಬೆಲೆಗಳು ಕುಸಿದಿವೆ. ಕೃಷಿ ಕಾರ್ಮಿಕರ ಲಭ್ಯತೆಯ ಸಮಸ್ಯೆ ಇದೆ. ಆದರೆ, ಈ ವಿಷಯಗಳು ರಾಜಕೀಯ ವಲಯದಲ್ಲಿ ಚರ್ಚೆಗೆ ಬಂದಿಲ್ಲ.

ಈರುಳ್ಳಿ ರಫ್ತಿನ ಮೇಲೆ ನಿಷೇಧ ಹೇರಿದ್ದು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹೊಡೆತ ನೀಡಿತ್ತು. ಈ ಚುನಾವಣೆಯಲ್ಲಿ ಸೋಯಾಬೀನ್ ಹಾಗೂ ಹತ್ತಿ ಬೆಲೆ ಕುಸಿತ ಪರಿಣಾಮ ಬೀರಬಹುದು ಎಂದು ಆರ್.ಟಿ.ಐ. ಕಾರ್ಯಕರ್ತ ದೀಪಕ್ ಜಗತಾಪ್ ಹೇಳಿದ್ದಾರೆ.

ಲಡ್ಕಿ ಬಹಿನ್ ಯೋಜನೆಯಿಂದಾಗಿ ಮಹಿಳೆಯರು ನೆರವು ಪಡೆದಿದ್ದಾರೆ. ಇದು ಆಡಳಿತಾರೂಡ ಮೈತ್ರಿ ಸರ್ಕಾರಕ್ಕೆ ನೆರವಾಗಬಹುದು ಎಂದೂ ಅವರು ಹೇಳಿದ್ದಾರೆ.

ನವೆಂಬರ್ 20ರಂದು 9.7 ಕೋಟಿ ಮತದಾರರು 288 ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ಮಾಡುವ ಅರ್ಹತೆ ಪಡೆದಿದ್ದಾರೆ. ಮುಂದಿನ ಸರ್ಕಾರದ ಸ್ವರೂಪ ಅಂದು ನಿರ್ಧಾರವಾಗಲಿದೆ.

# ಮಣಿಪುರದ ಕುರಿತು ಅಮಿತ್ ಷಾ ಚರ್ಚೆ

ನವದೆಹಲಿ, ನ. 17 - ಮಣಿಪುರದಲ್ಲಿ ಉಂಟಾಗಿರುವ ಪರಿಸ್ಥಿತಿಯ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಉನ್ನತ ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ್ದಾರೆ. ಮಣಿಪುರದಲ್ಲಿ ಶಾಂತಿ ನೆಲೆಗೊಳಿಸಲು ಸಾಧ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚನೆ ನೀಡಿದ್ದಾರೆ.ಮಹಾರಾಷ್ಟ್ರದಲ್ಲಿ ಆಯೋಜಿಸಲಾಗಿದ್ದ ಸಮಾವೇಶಗಳನ್ನು ರದ್ದುಗೊಳಿಸಿದ ನಂತರ ದೆಹಲಿಗೆ ಮರಳಿದ್ದ ಅಮಿತ್ ಷಾ, ರಾಜ್ಯದ ಪರಿಸ್ಥಿತಿ ಕುರಿತು ಉನ್ನತ ಅಧಿಕಾರಿಗಳ ಜೊತೆ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸೋಮವಾರ ಮತ್ತೊಂದು ಸಭೆ ನಡೆಸಲಿರುವ ಅಮಿತ್ ಷಾ, ಇನ್ನಷ್ಟು ಕ್ರಮಗಳನ್ನು ತೆಗೆದುಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ಕಾಯ್ದೆ ವಾಪಸ್

**(1ನೇ ಪುಟದಿಂದ)** ಕಾಯ್ದೆಯ ಪ್ರಕಾರ, ಕೆಲ ನಿರ್ದಿಷ್ಟ ಹುದ್ದೆಗಳನ್ನು ಹೊಂದಿರುವರು ಸಂಸತ್ ಸದಸ್ಯ ಸ್ಥಾನದಿಂದ ಅನರ್ಹರಾಗುತ್ತಾರೆ. ಕೆಲ ಪ್ರಕರಣಗಳಲ್ಲಿ ತಾತ್ಕಾಲಿಕ ಅನರ್ಹತೆಗೆ ಕಾರಣವಾಗುವ ಸೆಕ್ಷನ್ 4 ರದ್ದುಗೊಳಿಸಲೂ ಸಹ ಪ್ರಸ್ತಾಪಿಸಲಾಗಿದೆ.

# ಪ್ರಾಚೀನ ಕಲೆಯಾದ ಬಯಲಾಟ ಉಳಿಸಿ, ಬೆಳೆಸಬೇಕಿದೆ

## ಹರಪನಹಳ್ಳಿ: ನೀಲಗುಂದ ಗುಡ್ಡದ ವಿರಕ್ತ ಮಠದ ಶ್ರೀ ಚನ್ನಬಸವ ಶಿವಯೋಗಿಗಳು

ಹರಪನಹಳ್ಳಿ, ನ.17- ಪ್ರಾಚೀನ ಕಲೆಯಾದ ಬಯಲಾಟವನ್ನು ಉಳಿಸಿ ಬೆಳೆಸಬೇಕಾಗಿದೆ ಎಂದು ನೀಲಗುಂದ ಗುಡ್ಡದ ವಿರಕ್ತ ಮಠದ ಶ್ರಿ ಚನ್ನಬಸವ ಶಿವಯೋಗಿಗಳು ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಾಮರ್ಥ್ಯ ಸೌಧದಲ್ಲಿ ಗೌರಿ ಹುಣ್ಣಿಮೆ ಹಬ್ಬ ಹಾಗೂ ಶ್ರೀ ವೀರಭದ್ರೇಶ್ವರ ಜಾತ್ರೆಯ ನಿಮಿತ್ತ ಡಾ. ಅಂಬೇಡ್ಕರ್ ಸಮಾಜದ ಅಧ್ಯಕ್ಷ ಭೀಮಪ್ಪ ನಿಚ್ಚವ್ವನಹಳ್ಳಿ ಇವರ ಸಾರಥ್ಯದಲ್ಲಿ 'ಪಾಂಡು ವಿಜಯ ಅರ್ಥಾತ್ ಕೀಚಕನ ವಧೆ' ಎಂಬ ಬಯಲಾಟ ಪ್ರದರ್ಶನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಬಯಲಾಟ ರಾಜ್ಯದ ಜನಪದ ಕಲೆಗಳಲ್ಲಿ ಅತ್ಯಂತ ವೈವಿಧ್ಯದಿಂದ ಕೂಡಿದ ಗಂಡು ಕಲೆ. ಇದರಲ್ಲಿ ಸಾಹಿತ್ಯ, ಸಂಗೀತ, ನೃತ್ಯಗಳು ಮುಪ್ಪುರಿಗೊಂಡಿವೆ. ಪ್ರಾಚೀನ ಕಾಲದಿದಲೂ ಗ್ರಾಮೀಣರಿಗೆ ಮನರಂಜನೆ ಒದಗಿಸಿಕೊಂಡು



ಬರುತ್ತಿರುವ ಹವ್ಯಾಸಿ ಕಲೆ ಬಯಲಾಟವಾಗಿದೆ ಎಂದರು. ನಮ್ಮ ಪೂರ್ವಜರು ತಾವಾಡುವ ಭಾಷೆಯಲ್ಲೇ ಕಟ್ಟಿ ಉಳಿಸಿಕೊಂಡು ಬಂದಿರುವ ಸಾಹಿತ್ಯ ಸಂಪನ್ಮೂಲ ಅದುವೇ ಜನಪದ ಸಾಹಿತ್ಯ. ಅದೊಂದು ಮೌಖಿಕ ಪರಂಪರೆಯ ಅಭಿವ್ಯಕ್ತ ರೂಪವಾಗಿದೆ. ಇಂದಿನ ಯುವ ಸಮುದಾಯ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗಿ ಕಲೆಯ ಮೂಲಕ ಪುರಾತನ ಇತಿಹಾಸದ ದೊಡ್ಡಾಟ, ಬಯಲಾಟ ಕಲೆಗಳು ನಿರ್ಲಕ್ಷಕ್ಕೆ ಒಳಗಾಗುತ್ತಿವೆ ಎಂದು ವಿಷಾದಿಸಿದರು.

ವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಬಯಲಾಟ-ಜನಪದ ಕಲೆಗಳಲ್ಲಿಯೇ 'ಗಂಡು ಕಲೆ'. ಇದು ಗ್ರಾಮೀಣರ ಮನರಂಜನೆಯ ಭಾಗವೂ ಹೌದು. ಆಧುನಿಕತೆಯ ಬಿರುಗಾಳಿಗೆ ಸಿಲುಕಿ ಬಯಲಾಟ ಕಲಾವಿದರ ಬದುಕು ಸಂಕಷ್ಟಕ್ಕೆ ಸಿಲುಕಿದ್ದು ಬಯಲಾಟವನ್ನು ಉಳಿಸಿ ಬೆಳಸುವ ಕೆಲಸವಾಗಬೇಕು ಎಂದರು.

ಬಾಗಲಕೋಟೆಯ ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ. ಡಾ. ದುರ್ಗಾದಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ಆಧುನೀಕರಣದ ಭರಾಟೆಯಲ್ಲಿ ಸಾವಿರಾರು ವರ್ಷಗಳ ಇತಿಹಾಸ ಹೊಂದಿದ ದೊಡ್ಡಾಟ, ಬಯಲಾಟಗಳಂತಹ ರಂಗ ಕಲೆಗಳು ನಶಿಸಿ ಹೋಗುತ್ತಿರುವುದು ದುರ್ದೈವದ ಸಂಗತಿ ಎಂದರು.

ದಾವಣಗೆರೆ ಕಲಾವಿದರ ಸಂಘದ ಅಧ್ಯಕ್ಷ ಎನ್.ಎಸ್ ರಾಜಣ್ಣ, ಬಾಗಲಕೋಟಯ ಸಹಾಯಕ ಕೃಷಿ ಅಧಿಕಾರಿ ಶಂಕರ್ ಗಸ್ತಿ, ಹಗರಿಬೊಮ್ಮನಹಳ್ಳಿ ಕಲಾವಿದ ರಸಂಘದ ಅಧ್ಯಕ್ಷ ರಮೇಶ ಹಂಚಿನಮನಿ, ನ್ಯಾಯವಾದಿ ಉಮಾಶಂಕರ್, ಭಾಗವತರಾದ ಕೆ.ಬಿ. ಷಣ್ಮುಖಪ್ಪ, ಕೆ.ಬಿ.ನರಸಿಂಹಪ್ಪ, ಎ. ನೂರಸಾಹೇಬ್, ಮುಖಂಡರಾದ ಎಚ್.ಎನ್ ಪರಸನಾಯ್ಕ ಸೇರಿದಂತೆ ಇತರರು ಇದ್ದರು.

# ಆರೋಗ್ಯ ಇಲಾಖೆಯ ದಳವಾಯಿ ಗುಂಪಿಗೆ ಭರ್ಜರಿ ಜಯ



ದಾವಣಗೆರೆ, ನ.17- ನಿನ್ನೆ ನಡೆದ ಜಿಲ್ಲಾ ಸರ್ಕಾರಿ ನೌಕರರ ನಿರ್ದೇಶಕ ಸ್ಥಾನದ ಚುನಾವಣೆಯಲ್ಲಿ ಶಿವಾನಂದ ದಳವಾಯಿ ಗುಂಪಿನ ಅಭ್ಯರ್ಥಿಗಳು ಭರ್ಜರಿ ಜಯ ಸಾಧಿಸಿದ್ದಾರೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಎಚ್.ಕೆ.ಆರ್. ಆರೋಗ್ಯ ಸುರಕ್ಷಣಾಧಿಕಾರಿ ಶ್ರೀಮತಿ ಅರುಣಾದೇವಿ ಎ.ಡಿ. 125 ಮತ ಪಡೆದಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರ ರಾಮಗೊಂಡನಹಳ್ಳಿ ಆರೋಗ್ಯ ನಿರೀಕ್ಷಣಾಧಿಕಾರಿ ಶಶಿಧರ್ ಬಿ.ಎನ್ 175 ಅತಿ ಹೆಚ್ಚು ಮತ ಪಡೆದ ಅಭ್ಯರ್ಥಿಯಾಗಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರ ಅಜಾದ್ ನಗರ ಆರೋಗ್ಯ ಸುರಕ್ಷಣಾಧಿಕಾರಿ ಶ್ರೀಮತಿ ಸುಧಾ ಬಿ. 124 ಮತಗಳನ್ನು ಪಡೆದು ದಳವಾಯಿ ಗುಂಪಿನಿಂದ ಜಯಶಾಲಿಯಾಗಿದ್ದಾರೆ ಎಂದು ಶಿವಾನಂದ ದಳವಾಯಿ ತಿಳಿಸಿದ್ದಾರೆ.

# ವಿಪಿಎನ್ ಇಸ್ಲಾಂಗೆ ವಿರುದ್ಧ ಎಂದ ಪಾಕ್ ಸಂವಿಧಾನಿಕ ಸಂಸ್ಥೆ

ಇಸ್ಲಮಾಬಾದ್, ನ. 17 – ಅಂತರ್ಜಾಲದಲ್ಲಿ ನಿಷೇಧಿತ ಮಾಹಿತಿಯನ್ನು ವಿ.ಪಿ.ಎನ್. (ವರ್ಚ್ಯುಯಲ್ ಪ್ರೈವೇಟ್ ನೆಟ್‌ವರ್ಕ್) ಮೂಲಕ ಪಡೆಯುವುದು ಇಸ್ಲಾಂಗೆ ವಿರುದ್ಧವಾಗಿದೆ ಎಂದು ಪಾಕಿಸ್ತಾನದ ಪ್ರಮುಖ ಸಂವಿಧಾನಿಕ ಧಾರ್ಮಿಕ ಸಂಸ್ಥೆಯೊಂದು ತಿಳಿಸಿದೆ.

ಸಂಸತ್ತಿಗೆ ಇಸ್ಲಾಮಿಕ್ ಬೋಧನೆಗಳ ಕುರಿತು ಸಲಹೆಗಳನ್ನು ನೀಡುವ ಕೌನ್ಸಿಲ್ ಆಫ್ ಇಸ್ಲಾಮಿಕ್ ಐಡಿಯಾಲಜಿ (ಸಿ.ಐ.ಐ.) ಈ ಕುರಿತು ಆದೇಶ ಹೊರಡಿಸಿದೆ. ಇದು ಡಿಜಿಟಲ್ ಹಕ್ಕು ಕಾರ್ಯಕರ್ತರು ಹಾಗೂ ಕೆಲ ಧಾರ್ಮಿಕ ಮುಖಂಡರ ಅಸಮಾಧಾನಕ್ಕೆ ಕಾರಣವಾಗಿದೆ.

ಅನೈತಿಕ ವಿಷಯಗಳಿಗಾಗಿ ವಿ.ಪಿ.ಎನ್. ಬಳಸುವುದು ಷರಿಯಾಗೆ ವಿರುದ್ಧವಾಗಿದೆ ಎಂದು ಸಿ.ಐ.ಐ. ಮುಖ್ಯಸ್ಥ ರಘೀಬ್ ನಯಿಮ್ ಹೇಳಿರುವುದಾಗಿ ಡಾನ್ ಪತ್ರಿಕೆ ವರದಿ ಮಾಡಿದೆ. ಅಂತರ್ಜಾಲದಲ್ಲಿ ಅಶ್ಲೀಲ ಇಲ್ಲವೇ ಧರ್ಮ ನಿಂದನೆಯ ಅಂಶಗಳನ್ನು ನೋಡುವುದು ಷರಿಯಾಗೆ ವಿರುದ್ಧವಾಗಿದೆ ಎಂದು ಹೇಳುವುದಾದರೆ ವಿ.ಪಿ.ಎನ್.ಗೆ ಮೊದಲು ಮೊಬೈಲ್ ನಿಷೇಧಿಸಬೇಕು ಎಂದು ಪ್ರಮುಖ ಧಾರ್ಮಿಕ ವಿದ್ವಾಂಸ ಮೌಲಾನಾ ತಾರಿಕ್ ಜಮೀಲ್ ಹೇಳಿದ್ದಾರೆ.

ಪಾಕಿಸ್ತಾನ ಈಗ ಅಸಮರ್ಥ ಹಾಗೂ ಭ್ರಷ್ಟ ಉನ್ನತ ವರ್ಗದವರ ಆಡಳಿತದಲ್ಲಿದೆ. ಅವರು ನಿಜವಾದ ಜನಪ್ರತಿನಿಧಿಗಳೇ ಅಲ್ಲ ಎಂದು ಮಜ್ಲಿಸ್ ವಹದತ್ ಮುಸ್ಲಿಮೀನ್ ಸಂಘಟನೆಯ ಮುಖ್ಯಸ್ಥ ಸೆನೆಟರ್ ಅಲ್ಲಮ ನಸೀರ್ ಅಬ್ಬಾಸ್ ಹೇಳಿದ್ದಾರೆ. ಅವರು ಮನಸಿಗೆ ತೋಚಿದ ರೀತಿಯಲ್ಲಿ ಕಾನೂನು ರೂಪಿಸುತ್ತಿದ್ದಾರೆ ಹಾಗೂ ಆದೇಶಗಳನ್ನು ಹೊರಡಿಸುತ್ತಿದ್ದಾರೆ ಎಂದು ಅಬ್ಬಾಸ್ ಟೀಕಿಸಿದ್ದಾರೆ.

ತಂತ್ರಜ್ಞಾನ ಯಾವಾಗಲೂ ತಟಸ್ಥವಾಗಿರುತ್ತದೆ. ಅದನ್ನು ಯಾವ ರೀತಿ ಬಳಸಲಾಗುತ್ತದೆ ಎಂಬುದರ ಮೇಲೆ ಅದು ಧರ್ಮದ ಪರವಾಗಿದೆಯೇ ಅಥವಾ ವಿರುದ್ಧವಾಗಿದೆಯೇ ಎಂಬುದು ನಿರ್ಧಾರವಾಗುತ್ತದೆ ಎಂದು ಟೆಲಿಕಾಂ ಕಂಪನಿಯಾದ ನಯಾಟೆಲ್‌ನ ಸಿಇಒ ವಹಾಜ್ ರಾಜ್ ಹೇಳಿದ್ದಾರೆ.

ವಿ.ಪಿ.ಎನ್. ಅನ್ನು ಉಗ್ರವಾದಕ್ಕಾಗಿ ಬಳಸಲಾಗುತ್ತಿದೆ. ಹೀಗಾಗಿ ಅಕ್ರಮವಾಗಿ ವಿ.ಪಿ.ಎನ್. ಬಳಸುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಪಾಕಿಸ್ತಾನದ ಟೆಲಿಕಾಂ ಪ್ರಾಧಿಕಾರಕ್ಕೆ ಗೃಹ ಸಚಿವಾಲಯ ತಿಳಿಸಿತ್ತು.

ವಿ.ಪಿ.ಎನ್. ನಿಷೇಧ ಖಾಸಗಿತನದ ಹಕ್ಕಿಗೆ ವಿರುದ್ಧವಾಗಿದೆ. ಇದರಿಂದ ಸಾಮಾಜಿಕ ಮಾಧ್ಯಮಗಳ ಬಳಕೆದಾರರ ಮೇಲೆ ದಾಳಿ ನಡೆಸಬಹುದಾಗಿದೆ ಎಂದು ಡಿಜಿಟಲ್ ರೈಟ್ಸ್ ಫೌಂಡೇಷನ್‌ನ ನಿಘಾಟ್ ದಾದ್ ಹೇಳಿದ್ದಾರೆ. ನಯೀಮ್ ಹೇಳಿಕೆ ವೈಯಕ್ತಿಕವಾಗಿದೆ. ಅನೈತಿಕ ಮಾಹಿತಿಗಳನ್ನು ಪಡೆಯುವುದನ್ನು ಧಾರ್ಮಿಕ ವಿಷಯ ಎಂದು ಪರಿಗಣಿಸಲಾಗದು ಎಂದು ಸಿ.ಐ.ಐ. ಸದಸ್ಯರೊಬ್ಬರು ಸ್ಪಷ್ಟನೆ ನೀಡಿದ್ದಾರೆ.

# ದೆಹಲಿಗೆ ಸಚಿವ ಕೈಲಾಶ್ ಗಹ್ಲೋಟ್ ರಾಜೀನಾಮೆ

ನವದೆಹಲಿ, ನ. 17 – ದೆಹಲಿ ವಿಧಾನಸಭಾ ಚುನಾವಣೆ ಸನಿಹದಲ್ಲಿರುವಾಗಲೇ ಸಾರಿಗೆ ಸಚಿವ ಕೈಲಾಶ್ ಗೆಹ್ಲೋಟ್ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಆಮ್ ಆದ್ಮಿ ಪಾರ್ಟಿ ಎದುರಿಸುತ್ತಿರುವ ಹಲವಾರು ವಿವಾದಗಳ ಹಿನ್ನೆಲೆಯಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಪಕ್ಷಕ್ಕೆ ವಿದಾಯ ಹೇಳುತ್ತಿರುವುದಾಗಿ ಗೆಹ್ಲೋಟ್ ಹೇಳಿದ್ದಾರೆ.

ಗೆಹ್ಲೋಟ್ ಅವರು ಇ.ಡಿ. ತನಿಖೆ ಎದುರಿಸುತ್ತಿದ್ದರು. ಹೀಗಾಗಿ ಬಿಜೆಪಿಗೆ ಸೇರದೇ ಬೇರೆ ದಾರಿ ಇರಲಿಲ್ಲ. ಇದು ಬಿಜೆಪಿಯ ಕೊಳಕು ರಾಜಕೀಯ ಸಂಚು ಎಂದು ಆಮ್ ಆದ್ಮಿ ಪಾರ್ಟಿ ಆರೋಪಿಸಿದೆ.

ಆಮ್ ಆದ್ಮಿ ಪಾರ್ಟಿ ತನ್ನ ಮೌಲ್ಯಗಳನ್ನು ಮರೆತು ಅದರ ಸಂಚಾಲಕ ಅರವಿಂದ ಕೇಜ್ರಿವಾಲ್ ಹಿತಕ್ಕಾಗಿ ಕೆಲಸ ಮಾಡುತ್ತಿದೆ. ಹೀಗಾಗಿ ಹಲವಾರು ನಾಯಕರು ಪಕ್ಷ ಬಿಡುತ್ತಿದ್ದಾರೆ ಎಂದು ಬಿಜೆಪಿ ಹೇಳಿದೆ. ಕಳೆದ ಏಪ್ರಿಲ್ ತಿಂಗಳಲ್ಲಿ ಸಮಾಜ ಕಲ್ಯಾಣ ಸಚಿವ ರಾಜ್ ಕುಮಾರ್ ಆನಂದ್ ಪಕ್ಷ ತೊರೆದು ಬಿಜೆಪಿ ಸೇರಿದ್ದರು. ನಂತರ ಮಾಜಿ ಸಚಿವ ರಾಜೇಂದ್ರ ಪಾಲ್ ಗೌತಮ್ ಅವರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು.

ಬರುವ ಫೆಬ್ರವರಿ ತಿಂಗಳಲ್ಲಿ ದೆಹಲಿ ವಿಧಾನಸಭೆಗೆ ಚುನಾವಣೆ ನಡೆಯುವ ಸಾಧ್ಯತೆ ಇದೆ.

ಆಮ್ ಆದ್ಮಿ ಪಾರ್ಟಿಯು ಮುಂಬರುವ ದಿನಗಳಲ್ಲಿ ಮಹಿಳೆಯರಿಗೆ ತಿಂಗಳಿಗೆ ಸಾವಿರ ರೂ. ಕೊಡುಗೆ ನೀಡುವ ಯೋಜನೆ ಆರಂಭಿಸುವ ಸಿದ್ಧತೆಯಲ್ಲಿತ್ತು. ಗೆಹ್ಲೋಟ್ ರಾಜೀನಾಮೆಯಿಂದ ಈ ಯೋಜನೆ ಜಾರಿ ವಿಳಂಬವಾಗುವ ಸಾಧ್ಯತೆ ಇದೆ.

# ಕಳಪೆ ಗುಣಮಟ್ಟದ ಟಾರ್ಪಾಲ್ ಪೂರೈಕೆ ಪರಿಹಾರ ನೀಡಲು ಆಯೋಗದ ಆದೇಶ

ದಾವಣಗೆರೆ, ನ.16- ಕಳಪೆ ಗುಣಮಟ್ಟದ ಟಾರ್ಪಾಲ್ ಪೂರೈಕೆ ಮಾಡಿರುವ ತಯಾರಿಕಾ ಸಂಸ್ಥೆ ಹಾಗೂ ಮಾರಾಟಗಾರರಿಗೆ ಬಿಲ್ ಮೊತ್ತದೊಂದಿಗೆ ಬಡ್ಡಿ ಸಮೇತ ಪರಿಹಾರ ನೀಡಲು ಗ್ರಾಹಕರ ಆಯೋಗ ಆದೇಶ ನೀಡಿದೆ.

ತಾಲ್ಲೂಕಿನ ಆಲೂರು ಗ್ರಾಮದ ರೈತ ನಟರಾಜ್ ಎಂಬುವರು ಮುಂಬೈ ಮೂಲದ ಸಂಸ್ಥೆಯ ದಾವಣಗೆರೆ ಮಾರಾಟಗಾರರಿಂದ 2023ರ ಮೇ 26 ರಂದು ರೂ. 1,00,027 ಮೌಲ್ಯದ ಟಾರ್ಪಾಲ್ ಖರೀದಿಸಿದ್ದರು.

ಕೃಷಿ ಹೊಂಡದಲ್ಲಿ ಸಂಗ್ರಹಿಸಿದ ನೀರು ಟಾರ್ಪಾಲಿನ ಕಳಪೆ ಗುಣ ಮಟ್ಟದಿಂದ ಸೋರಿ ಹೋಗುತ್ತಿರುವುದರಿಂದ ಪರಿಹಾರ ಕೋರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮೊರೆ ಹೋಗಿದ್ದರು.

ಮುಂಬೈ ಮೂಲದ ಹಿಪ್ಪೋ ಟೆಕ್ ಟೆಕ್ಸ್ಮ್ ಕೋ ಹೌಸ್ ಮೂಲದ ತಯಾರಿಕಾ ಸಂಸ್ಥೆ ವಿರುದ್ದ ರೂ.20,000 ಮಾನಸಿಕ ಕಿರುಕುಳ ಹಾಗೂ ದೂರು ದಾಖಲಿಸಲು ಖರ್ಚು ಮಾಡಿದ ಮೊತ್ತ ರೂ.5,000 ಗಳನ್ನು ಪಾವತಿಸುವಂತೆ ದೂರನ್ನು ದಾಖಲಿಸಿದ್ದರು.

ರೈತರಿಗೆ ಹಣಕಾಸಿನ ಮತ್ತು ಮಾನಸಿಕ ತೊಂದರೆಯನ್ನು ಉಂಟು ಮಾಡಿದ್ದರಿಂದ ಸ್ಥಾನಿಕ ಮಾರಾಟಗಾರರು ಮತ್ತು ತಯಾರಕರು ಜಂಟಿಯಾಗಿ. ಟಾರ್ಪಾಲ್ ಮೊತ್ತ ರೂ.1,00,027/-ಗಳಿಗೆ ಶೇ 18%ರ ಬಡ್ಡಿಯೊಂದಿಗೆ ಖರೀದಿಸಿದ ದಿನಾಂಕದಿಂದ 3 ತಿಂಗಳ ಒಳಗಾಗಿ ಪಾವತಿಸುವಂತೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಮಹಂತೇಶ ಈರಪ್ಪ ಶಿಗ್ಲಿ, ಸದಸ್ಯರಾದ ತ್ಯಾಗರಾಜನ್ ಮತ್ತು ಶ್ರೀಮತಿ ಬಿ. ಯು. ಗೀತಾ ಆದೇಶಿಸಿರುತ್ತಾರೆ.

# ಹೈಪರ್‌ಸಾನಿಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ

**(1ನೇ ಪುಟದಿಂದ)** ಪಟ್ಟು ವೇಗದಲ್ಲಿ ಸಾಗಬಲ್ಲವು. ಆದರೆ, ನಿಗದಿತ ಮಾರ್ಗದಿಂದ ಬದಲಾಗುವ ಹೆಚ್ಚಿನ ಸಾಮರ್ಥ್ಯ ಹೊಂದಿರುವುದಿಲ್ಲ. ಹೈದರಾಬಾದ್‌ನಲ್ಲಿರುವ ಡಾ. ಎ.ಪಿ. ಜೆ. ಅಬ್ದುಲ್ ಕಲಾಂ ಕ್ಷಿಪಣಿ ಸಂಕೀರ್ಣ ಪ್ರಯೋಗಾಲಯ, ಡಿ.ಆರ್.ಡಿ.ಒ. ಪ್ರಯೋಗಾಲಯ ಹಾಗೂ ಕೈಗಾರಿಕೆಗಳ ಸಹಭಾಗಿತ್ವದಲ್ಲಿ ಈ ಕ್ಷಿಪಣಿ ರೂಪಿಲಾಗಿದೆ.

ಕಳೆದ ಕೆಲ ವರ್ಷಗಳಲ್ಲಿ ಭಾರತ ಡ್ರೋನ್, ಹೈಪರ್‌ಸಾನಿಕ್ ಕ್ಷಿಪಣಿ ಹಾಗೂ ಕೃತಕ ಬುದ್ಧಿವಂತಿಕೆ ಶಸ್ತ್ರಗಳೂ ಸೇರಿದಂತೆ ಹಲವು ಮುಂದಿನ ಪೀಳಿಗೆಯ ಶಸ್ತ್ರಗಳ ಕಡೆ ಹೆಚ್ಚಿನ ಗಮನ ಹರಿಸಿದೆ.

ಡಿ.ಆರ್.ಡಿ.ಒ. ಈಗಾಗಲೇ ಪೃಥ್ವಿ, ಆಕಾಶ್ ಹಾಗೂ ಅಗ್ನಿ ಮತ್ತಿತರೆ ಕ್ಷಿಪಣಿಗಳನ್ನು ಅಭಿವೃದ್ಧಿ ಪಡಿಸಿದೆ.

# ಬಸ್‌ನಿಲ್ದಾಣಕ್ಕೆ 'ವೀರರಾಣಿ ಕಿತ್ತೂರು ಚೆನ್ನಮ್ಮ' ಹೆಸರು

**(1ನೇ ಪುಟದಿಂದ)** ಉಪಾಧ್ಯಕ್ಷರನ್ನೊಳಗೊಂಡಂತೆ ಸರ್ವ ಸದಸ್ಯರು ಸಮ್ಮತಿ ವ್ಯಕ್ತಪಡಿಸಿದರು.

ಹೊನ್ನಾಳಿ-ತಿಮ್ಮಿಕ್ರನಕಟ್ಟೆ ರಸ್ತೆ ಅಗಲೀಕರಣದಲ್ಲಿ ಪುರಸಭೆ ವಾಣಿಜ್ಯ 12 ಮಳಿಗೆಗಳನ್ನು ಅಳತೆ ಪ್ರಕಾರ ಕೆಡುವಬೇಕಾಗುತ್ತದೆ. ಉಳಿದಿರುವ 26 ಮಳಿಗೆಗಳಲ್ಲಿ ಹಾನಿಯಾಗಿದ್ದ ಕೆಲವು ಮಳಿಗೆಗಳನ್ನು ಗುರುತಿಸಿ ಕೆಡುವಂತೆಯು, ಸಾಧ್ಯವಾದಲ್ಲಿ ಮಳಿಗೆಗಳ ಅಭಿವೃದ್ದಿಗೊಳಿಸಿ, ಆ ಮಳಿಗೆಗಳ ಹರಾಜಿಗೆ ಟೆಂಡರ್ ಕರೆಯಲು ತೀರ್ಮಾನಿಸಲಾಯಿತು.

ಮಲ್ಲದೇವರ ಕಟ್ಟೆ 29 ಎಕರೆ ಜಮೀನಿನಲ್ಲಿ ವಸತಿ ರಹಿತರಿಗೆ ಆಶ್ರಯ ಯೋಜನೆಯಡಿ ನಿವೇಶನ ಹಂಚಿಕೆಮಾಡಲು ಅರ್ಹ ಫಲಾನುಭವಿಗಳಿಂದ ಅರ್ಜಿ ಪಡೆದು ನಿವೇಶನ ಹಂಚಿಕೆ ಮಾಡಲು ತ್ವರಿತ ಗತಿಯಲ್ಲಿ ಕ್ರಮ ಕೈಗೊಳ್ಳಬೇಕಾದ ಬಗ್ಗೆ ತೀರ್ಮಾನಿಸಿದ ಸಭೆಯು ಇಂದಿರಾ



ಕ್ಯಾಂಟಿನ್ ಆರಂಭಿಸಲು ಸ್ಥಳ ನಿಗದಿಗೊಳಿಸಿ, ಶ್ರೀಘ್ರವೇ ಆರಂಭಿಸುವಂತೆ ಚರ್ಚಿಸಿದರು.

ಪಟ್ಟಣದ ಮಾತೆಂಗಮ್ಮ ದೇವಸ್ಥಾನ, ಹನುಮಾನ ದೇವಸ್ಥಾನ, ಸಾರ್ವಜನಿಕ ಗ್ರಾಂಥಾಲಯ, ದುರ್ಗಾಂಭಿಕಾ ದೇವಸ್ಥಾನ, ಪಾದಕಟ್ಟೆ, ಚೌಡೇಶ್ವರ ಪಾದಕಟ್ಟೆಗಳಿಗೆ ರಸ್ತೆ ಅಗಲೀಕರಣದ ಹಿನ್ನಲೆಯಲ್ಲಿ ಬದಲಿ ನಿವೇಶನ ಮಂಜೂರಾತಿ ಮಾಡುವ ಬಗ್ಗೆ ಆಯಾ ಸ್ಥಳಗಳಲ್ಲಿ ನಿವೇಶನಗಳಿದ್ದರೆ ಕಲ್ಪಿಸುವಂತೆ, ಈ ವಿಷಯವಾಗಿ ಶಾಸಕ ಶಾಂತನಗೌಡರು ಸಂಬಂಧಿಸಿದ ಎಇಇ ನಾಗರಾಜರವರಿಗೆ ದೂರವಾಣಿಯೊಂದಿಗೆ ಚರ್ಚೆ ನಡೆಸಿ ಮಾಹಿತಿ ಪಡೆದರು.

ದೇವನಾಯ್ಕನಹಳ್ಳಿ, ಹಿರೇಕಲ್ಮಠ ಗ್ರಾಮಸ್ಥರಿಗೆ ಈ ಸ್ವತ್ತು ನೀಡಲು ಇರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಂಡು ಈ ಸ್ವತ್ತು ನೀಡುವಂತೆ ಚರ್ಚಿಸಲಾಯಿತು.

ಪುರಸಭೆಯ ಮುಖ್ಯ ಅಧಿಕಾರಿ ಲೀಲಾವತಿ, ಪುರಸಭೆಯ ಉಪಾಧ್ಯಕ್ಷೆ ಸಾವಿತ್ರಮ್ಮ ವಿಜಯೇಂದ್ರಪ್ಪ, ಸದಸ್ಯರಾದ ಶ್ರೀಧರ್, ಬಾಬು ಹೋಬಳದಾರ, ರಂಗನಾಥ್, ರಾಜಣ್ಣ, ಧರ್ಮಪ್ಪ, ಎಂ.ಸುರೇಶ್, ಹೊಸಕೆರೆ ಸುರೇಶ್, ರಾಜೇಂದ್ರ, ಸುಮ ಮಂಜುನಾಥ್, ಸುಮಾ ಸತೀಶ್, ರಂಜಿತಾ ಚನ್ನಪ್ಪ, ಅನುಶಂಕರ ಚಂದ್ರು, ತನ್ವೀರ್, ಸವಿತಾ ಮಹೇಶ್, ಪದ್ಮಾ ಪ್ರಶಾಂತ, ಉಷಾ ಗಿರೀಶ, ಇಂಜಿನಿಯರ್ ದೇವರಾಜ್ ಇನ್ನಿತರರಿದ್ದರು.



**ಚಂಡೆ ಮದ್ದಳೆ..** ಜಿಲ್ಲಾಡಳಿತದ ವತಿಯಿಂದ 69ನೇ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಇಲ್ಲಿನ ಗಾಜಿನ ಮನೆಯಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಭಾನುವಾರ ಸಂಜೆ ಕಲಾವಿದರು ಚಂಡೆ ಮದ್ದಳೆ ನಡೆಸಿಕೊಟ್ಟರು.

# ದಾಸ ಸಾಹಿತ್ಯದ ಹರಿಕಾರ ಕನಕದಾಸರು



ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಪ್ರಸಿದ್ಧರಾದ ದಾಸರಲ್ಲಿ ಕನಕದಾಸರು ಒಬ್ಬರು. ದಾಸ ಪರಂಪರೆಯಲ್ಲಿ ಬರುವ 250ಕ್ಕೂ ಹೆಚ್ಚು ದಾಸರಲ್ಲಿ ಕನಕದಾಸರೊಬ್ಬರೇ ಕೆಳ ಪಂಗಡದ ದಾಸರು ಹಾಗೆಯೇ ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಾಕಾರರು.

ಕನಕದಾಸರು ದಂಡನಾಯಕನಾಗಿದ್ದು ಯುದ್ಧ ಒಂದರಲ್ಲಿ ಸೋತು ಅವರಿಗೆ ವೈರಾಗ್ಯ ಉಂಟಾಗಿ ಹರಿ ಭಕ್ತರಾದರಂತೆ. ಕನಕದಾಸರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಬಾಡ ಗ್ರಾಮದಲ್ಲಿ 1509ರಲ್ಲಿ ಬಚ್ಚಮ್ಮ ಮತ್ತು ಬೀರಪ್ಪನಾಯಕ ಎಂಬ ದಂಪತಿಗಳ ಮಗನಾಗಿ ಜನಿಸಿದರು.

ಸುಮಾರು ಐದು ನೂರು ವರ್ಷಗಳ ಹಿಂದಿನ ಮಾತು. ವಿಜಯನಗರ ಸಾಮ್ರಾಜ್ಯದಲ್ಲಿದ್ದ ಬಂಕಾಪುರ ಪ್ರಾಂತ್ಯದ ಮುಖ್ಯಪಟ್ಟಣದ ಹೆಸರು ಬಾಡ ಎಂದು. ವಿಜಯನಗರದಿಂದ ಗೋವಾಕ್ಕೆ ಹೋಗುವ ಹೆದ್ದಾರಿ. ಈ ಬಾಡದಿಂದಲೇ ಹಾಯ್ದು ಹೋಗುತ್ತಿತ್ತು. ಬಾಡ ಒಳ್ಳೆಯ ಆಯಕಟ್ಟಿನ ಸ್ಥಳ. ಈ ಬಂಕಾಪುರ ಪ್ರಾಂತ್ಯಕ್ಕೆ ಡಣ್ಣಾಯಕ, ಬೀರಪ್ಪನಾಯಕ. (ಡಣಾಯಕ ಎಂದರೆ ಆಯಕಟ್ಟಿನ ಸ್ಥಳದಲ್ಲಿ ಕಾದಿಟ್ಟ ಸೈನ್ಯದ ದಳಕ್ಕೆ ಸೇನಾಪತಿ ಎಂದು ನೇಮಿಸಲ್ಪಟ್ಟವನು) ಬೀರಪ್ಪನ ಹೆಂಡತಿ ಬಚ್ಚಮ್ಮ.

ಬೀರಪ್ಪನಾಯಕನಿಗೆ ತಿರುಪತಿ ತಿಮ್ಮಪ್ಪನಲ್ಲಿ ಬಹು ನಂಬಿಕೆ. ದಕ್ಷಿಣದಲ್ಲಿ ಸುಮಾರು ಒಂಬೈನೂರು ವರ್ಷಗಳ ಹಿಂದೆ ಶ್ರೀರಾಮಾನುಜಾ ಚಾರ್ಯರೆಂಬ ದೊಡ್ಡ ಗುರುಗಳು ಪ್ರಸಿದ್ಧರಾಗಿ ದ್ದರು. ಅವರು ಸ್ಥಾಪಿಸಿದ ಪಂಥಕ್ಕೆ ಶ್ರೀವೈಷ್ಣವ ಮತವೆಂದು ಹೆಸರು. ಡಣ್ಣಾಯಕ ಬೀರಪ್ಪನಾಯಕ ಮತ್ತು ಆತನ ಮಡದಿ ಬಚ್ಚಮ್ಮ ಇವರು ಶ್ರೀ ವೈಷ್ಣವ ಮತಕ್ಕೆ ಶರಣು ಹೋಗಿದ್ದರು. ಅಂದಿನಿಂದ ಇವರೂ ಸಹ ತಿರುಪತಿ ವಂಕಟೇಶ್ವರ ಸ್ವಾಮಿಯನ್ನೇ ತಮ್ಮ ಆರಾಧ್ಯ ದೈವವನ್ನಾಗಿ ಮಾಡಿಕೊಂಡರು.

ಬೀರಪ್ಪ ನಾಯಕ ಮತ್ತು ಬಚ್ಚಮ್ಮರಿಗೆ ಅನೇಕ ದಿನಗಳಿಂದ ಒಂದು ಹಂಬಲವಿತ್ತು. ಅದೇನೆಂದರೆ, ತಮಗೆ ಒಬ್ಬ ಕುಲದೀಪಕ ನಾದ ಮಗ ಜನಿಸಬೇಕು ಎಂದು. 'ವಂಶೋ ದ್ಧಾರಕನಾದ ಒಬ್ಬ ಮಗನನ್ನು ಕರುಣಿಸು' ಎಂದು ಈ ದಂಪತಿಗಳು ತಿರುಪತಿ ತಿಮ್ಮಪ್ಪ ನಿಗೆ ಹರಕೆ ಹೊತ್ತಿದ್ದರು. ಅವರ ಆಸೆ ಫಲಿಸಿತು. ಬೀರಪ್ಪ ನಾಯಕ ಮತ್ತು ಬಚ್ಚಮ್ಮರಿಗೆ ಒಬ್ಬ ಮಗ ಜನಿಸಿದ. ತಂದೆ-ತಾಯಿಗಳಿಗೆ ಆನಂದವೋ ಆನಂದ. ತಿರುಪತಿ ತಿಮ್ಮಪ್ಪನ ಆಶೀರ್ವಾದ ಎಂದು ಅವರು ತಮ್ಮ ಮಗುವಿಗೆ 'ತಿಮ್ಮಪ್ಪ' ಎಂದೇ ನಾಮಕರಣ ಮಾಡಿದರು. ತಿಮ್ಮಪ್ಪ ಜನಿಸಿದ ಕಾಲ ಇಂತದ್ದೇ ಎಂದು ತಿಳಿಯದು; ಹದಿನೈ ದನೇ ಶತಮಾನದ ಕೊನೆಯ ವರ್ಷಗಳಲ್ಲಿ ಹುಟ್ಟಿದರು ಎಂದು ಹೇಳಬಹುದು.

ತಿಮ್ಮಪ್ಪನಾಯಕ ಒಬ್ಬ ಸೇನಾಧಿಪತಿಯ ಮಗನಾಗಿ ಜನಿಸಿದನಷ್ಟೆ. ಬಾಲ್ಯದಲ್ಲಿಯೇ ಅಕ್ಷರಾಭ್ಯಾಸ, ಬಂಕಾಪುರದ ಶ್ರೀನಿವಾಸಾಚಾರ್ಯರ ಬಳಿ ವಿದ್ಯಾಭ್ಯಾಸವಾಗಿ, ವ್ಯಾಕರಣ, ತರ್ಕ, ಮೀಮಾಂಸೆ, ಸಾಹಿತ್ಯಗಳಲ್ಲಿ ಪಾರಂಗತನಾದನು. ಜೊತೆಗೆ ಕತ್ತಿವರಸೆ, ಕುದುರೆ ಸವಾರಿಯನ್ನೂ ಕಲಿತ. ಕೆಲವು ವರ್ಷಗಳಲ್ಲಿ ಬೀರಪ್ಪನಾಯಕ ಮತ್ತು ಬಚ್ಚಮ್ಮ ತೀರಿಕೊಂಡರು. ತಂದೆಯ ಬಳಿಕ ತಿಮ್ಮಪ್ಪ ನಾಯಕ ತನ್ನ ಕಿರಿವಯಸ್ಸಿನಲ್ಲಿಯೇ ಬಂಕಾಪುರ ಪ್ರಾಂತಕ್ಕೆ ಡಣಾಯಕನಾದ.

ಕನಕದಾಸರು ಶ್ರೀ ವ್ಯಾಸರಾಯರ ಮೆಚ್ಚಿನ ಶಿಷ್ಯರು. ವ್ಯಾಸರಾಯರಿಂದ ಮಧ್ವ ತತ್ವಶಾಸ್ತ್ರವನ್ನು ಕಲಿತು ಒಪ್ಪಿಕೊಂಡ ಕನಕದಾಸರು ಉಡುಪಿ ಶ್ರೀ ಕೃಷ್ಣನ ಅನನ್ಯ ಭಕ್ತರು. ಕಾಗಿನೆಲೆಯ ಆದಿಕೇಶವನ ಭಕ್ತರಾದ ಕನಕದಾಸರು ಜಾತಿ ಪದ್ಧತಿಯ ತಾರತಮ್ಯಗಳನ್ನು ಅಲ್ಲಗಳೆದರು. ಇವರ ಕೀರ್ತನೆಗಳ ಅಂಕಿತ ಕಾಗಿನೆಲೆಯ ಆದಿಕೇಶವರಾಯ ಎಂಬುದು. ಕನಕದಾಸರು ತಮ್ಮನ್ನು ತಾವೇ ಸಾವಿನ ದೇವತೆಯಾದ ಯಮನೆಂದು ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ.

ಕನಕದಾಸರು 316 ಕೀರ್ತನೆಗಳನ್ನು ರಚಿಸಿದ್ದಾರೆ. ಕನಕದಾಸರ ಭಕ್ತಿ ಪಾರಮ್ಯ ವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಶ್ರೀಹರಿಯನ್ನು ತಮ್ಮ ಧಣಿಯಾಗಿ, ಇನಿಯನಾಗಿ, ಅಣೋರಣೀಯ ನಾಗಿ, ಮಹತೋಮಹೀಮನಾಗಿ ಅವರು ಕಂಡಿದ್ದಾರೆ. 'ಬಾ ರಂಗ ಎನ್ನ ಮನಕೆ ಎಂದು ಹೃದಯ ಸದನಕ್ಕೆ'ಎಂದು ಕರೆದು ನೆಲೆ ನಿಲ್ಲಿಸಿಕೊಂಡ ಅನುಭಾವ ಅವರದು. ಒಳಗಣ್ಣಿನಿಂದ ಅವನ ಕಂಡು- ಕಂಡೆ ನಾ ತಂಡ ತಂಡ ಹಿಂಡು ದೈವ ಪ್ರಚಂಡ ರಿಪು ಗಂಡ ಉದ್ದಂಡ ನರಸಿಂಹನ' ಎಂದು ಸಂತೋಷಪಟ್ಟಿದ್ದಾರೆ. 'ಎಲ್ಲಿ ನೋಡಿದರಲ್ಲಿ ರಾಮ' ಎಂಬ ಅನುಭೂತಿಯಲ್ಲಿ ಹರಿಯನ್ನು ಕಂಡ ಬಳಿಕ 'ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು' ಎಂಬ ಧನ್ಯತಾಭಾವ. 'ದಾಸದಾಸರ ಮನೆಯ ದಾಸಿಯರ ಮಗ ಮಂಕುದಾಸ ಮರುಳುದಾಸ ನರಜನ್ಮಹುಳು ಪರಮಪಾಪಿ' ಎಂದು ಕರೆದುಕೊಂಡಿದ್ದ ಅವರು ಜೀವ ಮಾಗಿ ಹಣ್ಣಾದಂತೆ ಪರಮಾತ್ಮನ ಸಾಕ್ಷಾತ್ಕಾರವಾದಂತೆ 'ಆತನೊಲಿದ ಮೇಲೆ ಇನ್ಯಾತರ ಕುಲವಯ್ಯಾ' ಎಂದುಕೊಳ್ಳುತ್ತಾರೆ.

**ಕನಕದಾಸರ ಕೀರ್ತನೆಗಳ ಪ್ರಸ್ತುತತೆ:** ಕನಕದಾಸರ ಕೀರ್ತನೆಗಳು 15ನೇ ಶತಮಾನದಲ್ಲಿ ರಚನೆಯಾಗಿವೆಯಾದರೂ ಅವು ಇಂದಿಗೂ ಪ್ರಸ್ತುತವೆನಿಸಿವೆ ಹಾಗೆಯೇ ಅವರ ಕೀರ್ತನೆಗಳು 'ತಲ್ಲಣಿಸದಿರು ಕಂಡ ತಾಳು ಮನವೇ ಎಲ್ಲರನು ಸಲಹುವನ್ನು ಇದಕ್ಕೆ ಸಂಶಯವಿಲ್ಲ' ಎಂಬ ಸಾಲುಗಳ ಮೂಲಕ ಲೋಕದಲ್ಲಿ ನಡೆಯುವ ಎಲ್ಲಾ ಕ್ರಿಯೆಗಳಲ್ಲೂ ಭಗವಂತನ ಪಾತ್ರ ಇದೆ ಅದು ಅಗೋಚರವಾದದ್ದು ಎಂದು ಹೇಳಿದ್ದಾರೆ

ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನ್ನು ಏನಾದರೂ ಬಲ್ಲಿರಾ ಎಂಬ ವಾಣಿಯ ಮೂಲಕ 15ನೇ ಶತಮಾನದಲ್ಲಿ ರಾಮಧಾನ್ಯ ಚರಿತೆ ಕೃತಿಯ ಮೂಲಕ ಜಾತಿ ಶ್ರೇಷ್ಠತೆ ಮತ್ತು ಕನಿಷ್ಠತೆಯ ಸಂಘರ್ಷವನ್ನು ಧಾನ್ಯಗಳ ಮೂಲಕ ವಿಮರ್ಶಾತ್ಮಕವಾಗಿ ವಿವರಿಸುವ ಮೂಲಕ ಜಾತಿಗಳ ನಡುವೆ ಸಾಮರಸ್ಯವನ್ನು ಮೂಡಿಸುವ ಕಾರ್ಯ ಮಾಡಿದರು. ಅದು ಪ್ರಸ್ತುತ ಸಮಾಜಕ್ಕೆ ಒಂದು ಮಾದರಿ ಸಂದೇಶವೆನ್ನುವುದರಲ್ಲಿ ಎರಡು ಮಾತಿಲ್ಲ.

ಪರಸತಿಯ ನೋಡದಿರು
ದುರ್ಜನರ ಕೂಡದಿರು
ಗರ್ವದ ಮಾತುಗಳ ಆಡದಿರು ಕೈಯ ಹಿಂದೆಗೆವ ಹೇಡಿಯನ್ನು ಬೇಡದಿರು ಬೀದಿ ಗೊಳುಂಬ ದೈವಗಳನ್ನು ಕೊಂಡಾಡದಿರು.

ಈ ಕೀರ್ತನೆಯಲ್ಲಿ ಕನಕದಾಸರು ಪ್ರಸ್ತುತ ದಿನಮಾನಗಳಲ್ಲಿ ಸಾಮಾಜಿಕ ಮಾಧ್ಯಮಗಳ ಮೂಲಕ ನಡೆಯುವ ಅನೈತಿಕತೆ, ಆಡಂಬರಗಳು ಹಾಗೂ ಸಮಾಜದಲ್ಲಿ ಕುಸಿಯುತ್ತಿರುವ ಮಾನವೀಯ ಮೌಲ್ಯಗಳು ಮತ್ತು ಮಾನವೀಯತೆಯನ್ನು ಮರೆಮಾಚುತ್ತಿರುವ ಬಗೆಯನ್ನು ಹಾಗೂ ನಾನೇ ಶ್ರೇಷ್ಠ ಎಂಬ ಅಹಂ ಅನ್ನು ಖಂಡಿಸಿದ್ದಾರೆ. ನೀಡದಿರುವವನನ್ನು ನಾವು ಎಂದೂ ಕೂಡ ಬೇಡಬಾರದು ಎಂಬ ಮಾತುಗಳನ್ನು ಈ ಸಾಲುಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಮನದಲ್ಲಿ ಕಪಟವಿಟ್ಟುಕೊಂಡು
ಎಷ್ಟು ಜಪ ಮಾಡಿದ್ದರೇನು ಫಲ.?

ಇದು ಇಂದಿನ ಜನರ ಜೀವನಕ್ಕೆ ಹಿಡಿದ ಕೈಗನ್ನಡಿಯಂತೆ ಇದೆ. ಪ್ರಸ್ತುತ ದಿನಮಾನಗಳಲ್ಲಿ ಬದುಕನ್ನು ಕಪಟತನದಿಂದಲೇ ಕಳೆಯುತ್ತಿರುವ ಮನುಷ್ಯನಿಗೆ ಈ ಸಾಲು ಅರ್ಥಪೂರ್ಣವಾಗಿ ಬಿಂಬಿಸುತ್ತಿವೆ. ಮನಸ್ಸಿನಲ್ಲಿ ಕಪಟವನ್ನು ಇಟ್ಟುಕೊಂಡು ಒಳ್ಳೆಯವರಂತೆ ನಟಿಸುತ್ತಿರುವ ಸಮಾಜದ ಅನೇಕ ಮಹಾಶಯರಿಗೆ ಇಂತಹ ಸಾಲುಗಳು ಅನ್ವಯಿಸುತ್ತವೆ.

ಒಡಲಿನ ಆಸೆಗಾಗಿ ಜೇನಿನೊಳಗೆ ಬಿದ್ದು ಸಾಯುವ ನೊಣದಂತೆ ನಾನಾಗಿರುವೆ ನನ್ನನ್ನು ಈ ಜೀವನ ಈ ಬಂಧನದಿಂದ ಮುಕ್ತಗೊಳಿಸು ರಂಗನೇ.

ಇಲ್ಲಿ ಸಂಸಾರವೆಂಬ ಅಲ್ಪ ಸುಖಕ್ಕಾಗಿ ಸಾಗರದಷ್ಟು ದುಃಖ ಎಂಬಂತೆ ನೋವನ್ನು ಪಡುತ್ತಿರುವ ಮನುಜನ ಅಂತರಾಳವನ್ನು ವ್ಯಕ್ತಪಡಿಸುತ್ತಿರುವುದು ಹಾಗೂ ಇಂದಿಗೂ ಈ ಸಾಲುಗಳು ಪ್ರಸ್ತುತವೆನಿಸುತ್ತವೆ ಮನುಷ್ಯನ ಜೀವನ ಬರಿ ಸಂಸಾರದ ಬಂಧನಕ್ಕೆ ಒಳಗಾಗದೆ ಅದರ ಆಚೆಗೂ ಒಂದು ಅಧ್ಯಾತ್ಮಿಕ ನಿಲುವು ತಾಳುವ ಮೂಲಕ ಜೀವನದಲ್ಲಿ ಮುಕ್ತಿಯನ್ನು ಪಡೆಯಬೇಕೆಂಬುದು ಈ ಒಂದು ಕೀರ್ತನೆಯ ಆಶಯವಾಗಿದೆ.

ಹಿಂದೆ ನನ್ನ ಬೈದವರೆಲ್ಲ ಚಂದಾಗಿರಲಿ ಮುಂದೆ ಎನ್ನ ಬೈಯುವವರೆಲ್ಲ ಅಂದಣ ಏರಲಿ

ಇಲ್ಲಿ ಸಮಾಜದ ಕುಹಕದ ಮಾತುಗಳನ್ನು ನಿರ್ಲಕ್ಷಿಸಿ ಬದುಕಬೇಕೆಂಬುದನ್ನು ಅವರಿಗೆ ಒಳಿತನ್ನು ಬಯಸಿ ಮುಂದೆ ನಡೆಯ ಬೇಕೆಂಬುದು ಈ ಒಂದು ಸಾಲುಗಳ ಮೂಲಕ ಮಾರ್ಮಿಕವಾಗಿ ವಿವರಿಸಿರುವುದು ಪ್ರಸ್ತುತ ಸಮಾಜಕ್ಕೆ ಹಿಡಿದ ಕೈಗನ್ನಡಿಯನ್ನಬಹುದು. ಹೀಗೆ ಕನಕದಾಸರ ಕೀರ್ತನೆಗಳು, ರಚನೆಯಾಗಿ ಐದರಿಂದ ಆರು ಶತಮಾನಗಳು ಕಳೆದರೂ ಪ್ರಸ್ತುತ ದಿನಮಾನಕ್ಕೆ ಅತ್ಯಂತ ಸೂಕ್ತವೂ ಎನಿಸಿವೆ.



- ಬಸವರಾಜ.
ಕರುವಿನ
ಬಸವನಾಳು.

## ಇನ್ನರ್‌ವ್ಹೀಲ್ ಕ್ಲಬ್‌ನಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಣೆ



ದಾವಣಗೆರೆ, ನ.17- ನಗರದ ಇನ್ನರ್‌ವ್ಹೀಲ್ ಕ್ಲಬ್ ದಾವಣಗೆರೆ ವತಿಯಿಂದ ಹೊಳೆಸಿರಿಗೆರೆಯ ಸರ್ಕಾರಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಆಚರಿಸಲಾಯಿತು.

ಕ್ಲಬ್ ವತಿಯಿಂದ ಶಾಲಾ ಮಕ್ಕಳಿಗೆ 75 ಶಾಲಾ ಬ್ಯಾಗ್, 200 ನೋಟ್‌ಬುಕ್ ಮತ್ತು 200 ಕೈ ಚೀಲಗಳನ್ನು ವಿತರಿಸಲಾಯಿತು.

ಇಂಟರ್‌ನ್ಯಾಷನಲ್ ಇನ್ನರ್‌ವ್ಹೀಲ್ ಕ್ಲಬ್‌ನ 101ನೇ ವರ್ಷದ ಸಂಭ್ರಮಾಚರಣೆ ಮತ್ತು ದಾವಣಗೆರೆ ಇನ್ನರ್‌ವ್ಹೀಲ್‌ನ ಕ್ಲಬ್‌ನ 50ನೇ ವರ್ಷದ ಸುವರ್ಣ ಮಹೋತ್ಸವವಾಗಿದೆ. 1974ರಲ್ಲಿ ದಿ. ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ಕ್ಲಬ್ ಸ್ಥಾಪಿಸಿದ್ದರು.

ಈ ಸಂದರ್ಭದಲ್ಲಿ ಕ್ಲಬ್‌ನ ಜಿಲ್ಲಾ ಅಧ್ಯಕ್ಷರಾದ ಶ್ರೀಮತಿ ಡಾ. ಚೈತಾಲಿ ರಾಘೋಜಿ, ಕಾರ್ಯದರ್ಶಿ ಶ್ರೀಮತಿ ಸುಚಿತ್ರಾ ಮಾಗಾನಹಳ್ಳಿ, ಸದಸ್ಯರಾದ ಡಾ. ಶೋಭಾ ಧನಂಜಯ್, ಆಶಾ ಜಗದೀಶ್, ಭಾಗ್ಯ ರವಿಶಂಕರ್ ಹಾಗೂ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಬಿ.ವಿ.ಐ.ನಿಂದ ಆರೋಗ್ಯ ತಪಾಸಣೆ



ದಾವಣಗೆರೆ, ನ. 17- ಬಿ.ವಿ.ಐ. ಹಾಗೂ ಬಾಲಾಜಿ ಎಜುಕೇಷನಲ್ ಅಂಡ್ ಸೋಷಿಯಲ್ ವೆಲ್ಫೇರ್ ಟ್ರಸ್ಟ್ ಹಾಗೂ ಆಕುಕ ಇಲಾಖೆ ದಾವಣಗೆರೆ ತಾಲ್ಲೂಕು ಮತ್ತು ದಾವಣಗೆರೆ ಹೈಟೆಕ್ ಡಯಾಗ್ನೋಸ್ಟಿಕ್ ಸೆಂಟರ್ ಇವರ ಸಹಯೋಗದೊಂದಿಗೆ ಈಚೆಗೆ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.

ಕಾರ್ಯದರ್ಶಿ ರಮೇಶ್ ಬಾಬು ಗುಜ್ಜರ್ ಕಾರ್ಯಕ್ರಮ ನಿರೂಪಿಸಿದರು. ಅಧ್ಯಕ್ಷರಾದ ಶ್ರೀಮತಿ ಸರಳ ಆಮಟೆ ಸ್ವಾಗತಿಸಿದರು.

ಅತಿಥಿಗಳಾಗಿ ದೈವ ಮಂಡಳಿಯ ಕಾರ್ಯದರ್ಶಿ ಈಶ್ವರರಾವ್ ಗುಜ್ಜರ್ ಆಗಮಿಸಿದ್ದರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ದೇವರಾಜ್ ಪಟಕೆ ಮಾತನಾಡಿದರು. ಕೈಲಾಸ್ ರಕ್ತ ಪರೀಕ್ಷೆ ಬಗ್ಗೆ ವಿವರಿಸಿದರು. ಶಿಬಿರದಲ್ಲಿ ರಕ್ತದೊತ್ತಡ, ಮಧುಮೇಹ, ಕಫ, ಡೆಂಗ್ಯೂ, ಕಣ್ಣಿನ ಪರೀಕ್ಷೆ, ಲಿಪಿಡ್ ಆರ್‌ಬಿಎಸ್ ಪ್ರೊಫೈಲ್, ಕೊಲೆಸ್ಟ್ರಾಲ್ ಪರೀಕ್ಷೆ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಬಿ.ವಿ. ಐ. ನ ಮಾಜಿ ಗವರ್ನರ್ ಗೋಪಾಲ ನವಲೆ, ಪದಾಧಿಕಾರಿಗಳಾದ ಮಹೇಶ್ ಶೇಂಡಿಗೆ, ರಮೇಶ ಅಂಬರ್‌ಕರ್, ದಯಾನಂದ ಮಹೇಂದ್ರಕರ್, ಶ್ರೀಮತಿ ನಯನ ಅಂಬರ್‌ಕರ್, ಶ್ರೀಮತಿ ಆರತಿ ಗುಜ್ಜರ್, ಶ್ರೀಮತಿ ಅನುಸೂಯ ಗುಜ್ಜರ್, ಶ್ರೀಮತಿ ಉಷಾ ಮಹೇಂದ್ರಕರ್. ಸದಸ್ಯರಾದ ಮಂಜುನಾಥ ಗಡ್ಡಾಳೆ, ಡಾ. ಶಿಲ್ಪಾ ಹಿರಾಸ್ಕರ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು 'ಶ್ರೀಕೃಷ್ಣ ಸಂಧಾನ' ನಗೆ ನಾಟಕ ಪ್ರದರ್ಶನ

ಇಂದು ಸಂಜೆ 6.30ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಬಳ್ಳಾರಿ ಜಿಲ್ಲೆಯ ಸಿರಿಗೆರೆಯ ಧಾತ್ರಿ ರಂಗ ಸಂಸ್ಥೆಯ ಕಲಾವಿದರು 'ಶ್ರೀ ಕೃಷ್ಣ ಸಂಧಾನ' ನಗೆ ನಾಟಕ ಅಭಿನಯಿಸುವರು. ನಿಟುವಳ್ಳಿ ಭೀಮೇಶ್ ಹಾಲೋಳ್ ಎನ್. ನಾಟಕ ನಿರ್ದೇಶಿಸಿದ್ದಾರೆ.

ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಉದ್ಘಾಟಿಸುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ ವಹಿಸುವರು.

ವೃತ್ತಿ ರಂಗಭೂಮಿ ರಂಗಾಯಣದ ವಿಶೇಷ ಅಧಿಕಾರಿ ರವಿಚಂದ್ರ ಮತ್ತು ರಂಗ ಅನಿಕೇತನ ತಂಡದ ಮುಖ್ಯಸ್ಥರಾದ ಸುಧಾ ಹೆಚ್.ಎನ್ ಉಪಸ್ಥಿತರಿರುವರು. ವೃತ್ತಿ ರಂಗಭೂಮಿ ರಂಗಾಯಣ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ರಂಗ ಅನಿಕೇತನ ಇವರ ಸಂಯುಕ್ತಾಶ್ರಯದಲ್ಲಿ ಪ್ರದರ್ಶಿಸಲ್ಪಡುವ ನಾಟಕ ವೀಕ್ಷಿಸಲು ಉಚಿತ ಪ್ರವೇಶವಿರುತ್ತದೆ.

## ಚಳ್ಳಕೆರೆ: ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ



ಚಳ್ಳಕೆರೆ, ನ. 16- ಇಲ್ಲಿನ ಜಿಲ್ಲಾ ಕೇಂದ್ರ ಗ್ರಂಥಾಲಯ ಚಿತ್ರದುರ್ಗ ಮತ್ತು ತಾಲ್ಲೂಕು ಶಾಖಾ ಗ್ರಂಥಾಲಯದ ಸಹಯೋಗದೊಂದಿಗೆ ಗ್ರಂಥಾಲಯ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಬುದ್ಧ ವೇದಿಕೆ ತಾಲ್ಲೂಕು ಅಧ್ಯಕ್ಷ ಮೈತ್ರಿ ದ್ಯಾಮಣ್ಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗ್ರಂಥಾಲಯಕ್ಕೆ ಓದುಗರು ಬಂದು ಉತ್ತಮವಾದ ಪುಸ್ತಕಗಳನ್ನು ಓದುತ್ತಾ ನಿಮ್ಮ ಜ್ಞಾನ ಹೆಚ್ಚಿಸಿಕೊಳ್ಳಬೇಕು ಎಂದರು.

ಗ್ರಂಥಾಲಯ ಅಧಿಕಾರಿ ಡಿ. ತಿಮ್ಮರಾಯ್, ಸಹಚರರಾದ ಎಂ.ಓ. ರೂಪಾ, ಕರವೇ ಅಧ್ಯಕ್ಷ ಹೆಚ್. ಬಾಬು, ಓದುಗರಾದ ಕೆ.ಪಿ. ಶ್ರೀನಿವಾಸ್, ಆಸೀಫ್, ರಾಮಾಂಜನೇಯ, ಸುದೀಪ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ ವತಿಯಿಂದ ಧ್ಯಾನ ಶಿಬಿರವು ಇಂದಿನಿಂದ ಇದೇ ದಿನಾಂಕ 24ರವರೆಗೆ ಪ್ರತಿದಿನ ಬೆಳಿಗ್ಗೆ 6ರಿಂದ 7.30 ರವರೆಗೆ ನಡೆಯಲಿದೆ. ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಲಿರುವ ಈ ಧ್ಯಾನ ಶಿಬಿರದಲ್ಲಿ ಧ್ಯಾನಾಸಕ್ತರು ಭಾಗವಹಿಸಬಹುದು ಎಂದು ಅರ್ಚನ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

## ತಮಿಳುನಾಡು ತೆಲುಗು ಭಾಷಿಗರ ಕುರಿತ ಹೇಳಿಕೆ ನಟಿ ಕಸ್ತೂರಿ ಬಂಧನ, ನ್ಯಾಯಾಂಗ ಕಸ್ಟಡಿಗೆ

ಚೆನ್ನೈ, ನ. 17 – ತಮಿಳುನಾಡಿನ ತೆಲುಗು ಮಾತನಾಡುವ ಜನರ ಬಗ್ಗೆ ಆಕ್ಷೇಪಾರ್ಹ ಮಾತುಗಳನ್ನು ಆಡಿದ್ದರು ಎನ್ನಲಾದ ನಟಿ ಕಸ್ತೂರಿ ಅವರನ್ನು ಬಂಧಿಸಲಾಗಿದೆ. ಅವರನ್ನು ನ್ಯಾಯಾಂಗ ಕಸ್ಟಡಿಗೆ ವಹಿಸಲಾಗಿದೆ.

ನವೆಂಬರ್ 16ರಂದು ಹೈದರಾಬಾದ್‌ನಲ್ಲಿ ಚೆನ್ನೈ ಪೊಲೀಸರ ತಂಡ ಅವರನ್ನು ಬಂಧಿಸಿತ್ತು. ನಟಿ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠ ತಳ್ಳಿ ಹಾಕಿತ್ತು. ನಂತರ ಅವರನ್ನು ಬಂಧಿಸಲಾಗಿದೆ.

ನಟಿ ತಮ್ಮ ಹೇಳಿಕೆಗಳನ್ನು ವಾಪಸ್ ಪಡೆದು ಕ್ಷಮೆ ಯಾಚಿಸಿದ್ದರು. ಆದರೂ ಅವರ ವಿರುದ್ಧ ದೂರುಗಳನ್ನು ದಾಖಲಿಸಲಾಗಿತ್ತು.

ಚೆನ್ನೈ ಪೊಲೀಸರ ತಂಡ ಹೈದರಾಬಾದ್‌ನ ಚಿತ್ರ ನಿರ್ಮಾಪಕರೊಬ್ಬರ ಮನೆಯಲ್ಲಿ ನಟಿ ಕಸ್ತೂರಿ ಅವರನ್ನು ಬಂಧಿಸಿದೆ.

ಅವರನ್ನು ಚೆನ್ನೈಗೆ ಕರೆ ತಂದು ಎಗ್ಮೋರೆಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಎದುರು ಹಾಜರು ಪಡಿಸಲಾಯಿತು. ಅವರನ್ನು ನವೆಂಬರ್ 29ರವರೆಗೆ ನ್ಯಾಯಿಕ ಕಸ್ಟಡಿಗೆ ವಹಿಸಲಾಗಿದೆ. ಅವರನ್ನು ಪುಝ್ಝ ಕೇಂದ್ರ ಬಂಧೀಖಾನೆಯಲ್ಲಿ ಇರಿಸಲಾಗಿದೆ.

ನಟಿ ಕ್ಷಮೆ ಯಾಚಿಸಿದ ನಂತರವೂ ಅವರನ್ನು ಬಂಧಿಸಿ ಜೈಲಿನಲ್ಲಿರಿಸುವ ಅಗತ್ಯವೇನಿದೆ? ಎಂದು ತಮಿಳು ರಾಷ್ಟ್ರೀಯವಾದಿ ನಾಮ್ ತಮಿಳರ್ ಕಚ್ಚಿ ಅಧ್ಯಕ್ಷ ಸೀಮನ್ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಶತಮಾನಗಳ ಹಿಂದೆ ತಮಿಳುನಾಡಿನ ಆಡಳಿತಗಾರರಿಗೆ ಸೇವೆ ಸಲ್ಲಿಸಲು ಬಂದಿದ್ದ ಕೆಲ ತೆಲುಗು ಭಾಷಿಗರು ಈಗ ತಮ್ಮನ್ನು ತಮಿಳರು ಎಂದು ಹೇಳಿಕೊಳ್ಳುತ್ತಿದ್ದಾರೆ ಎಂದು ನಟಿ ಕಸ್ತೂರಿ ಹೇಳಿದ್ದರು.

ತೆಲುಗು ಮೂಲದ ಈ ವ್ಯಕ್ತಿಗಳು ತಮ್ಮನ್ನು ತಮಿಳರು ಎಂದು ಹೇಳಿಕೊಳ್ಳುತ್ತಾರೆ. ಆದರೆ, ತಮಿಳು ಬ್ರಾಹ್ಮಣರನ್ನು ತಮಿಳರು ಎಂದು ಪರಿಗಣಿಸುವುದಿಲ್ಲ. ಹೀಗಾಗಿಯೇ ಅವರು ತಮ್ಮನ್ನುದ್ರಾವಿಡರು ಎಂದು ಹೇಳಿಕೊಳ್ಳುತ್ತಾರೆಯೇ ವಿನಹ ತಮಿಳರು ಎಂದು ಕರೆದುಕೊಳ್ಳುವುದಿಲ್ಲ ಎಂದು ಕಸ್ತೂರಿ ತಿಳಿಸಿದ್ದರು.

## ಕದಳಿ ಮಹಿಳಾ ವೇದಿಕೆಯಿಂದ ಪ್ರಬಂಧ ಸ್ಪರ್ಧೆ

ದಾವಣಗೆರೆ, ನ. 17 - ಕದಳಿ ಮಹಿಳಾ ವೇದಿಕೆಯ ವಾರ್ಷಿಕೋತ್ಸವದ ಪ್ರಯುಕ್ತ, ದಾವಣಗೆರೆ ಜಿಲ್ಲೆಯ ಸಾರ್ವಜನಿಕ ಮಹಿಳೆಯರಿಗೆ ಹಾಗೂ ನಮ್ಮ ಕದಳಿ ಮಹಿಳಾ ವೇದಿಕೆಯ ಸದಸ್ಯ ರಿಗೆ ಪ್ರಬಂಧ ಸ್ಪರ್ಧೆ ನಡೆಯಲಿದೆ. ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ ವಿಷಯದ ಮೇಲೆ ಪ್ರಬಂಧ ಬರೆಯಲು ಆಸಕ್ತಿ ಇರುವವರು ಪುಟದ ಒಂದೇ ಮಗ್ಗುಲಲ್ಲಿ , ನಾಲ್ಕು ಪುಟಗಳಿಗೆ ಮೀರದಂತೆ ಬರೆದು ಗಾಯತ್ರಿ ವಸ್ತ್ರದ್, ಮನೆ ನಂಬರ್ 2002/3, ಎಂ.ಸಿ.ಸಿ.'ಎ' ಬ್ಲಾಕ್, ದಾವಣಗೆರೆ -4 99869 83277 ಅಥವಾ ಮಮತಾ ನಾಗ ರಾಜ್, ಶ್ರೀಗಂಧ, 10ನೇ ಕ್ರಾಸ್, ಆಂಜನೇಯ ಬಡಾವಣೆ, 99648 29122 ಇಲ್ಲಿಗೆ ಇದೇ ದಿನಾಂಕ 30ರೊಳಗೆ ಕಳುಹಿಸಬಹುದಾಗಿದೆ.


**ಸೈಟ್, ಮನೆ, ಜಮೀನು**
ಅರ್ಧ (1/2%) ಪರ್ಸೆಂಟ್ ಕಮಿಷನ್‌ಗೆ ಕೊಡಿಸುತ್ತೇನೆ, ಮಾರಿಸುತ್ತೇನೆ.
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ದಯವಿಟ್ಟು ನಿಮ್ಮ ಸ್ನೇಹಿತರಿಗೆ. ಬಂಧು-ಬಳಗದವರಿಗೆ ತಿಳಿಸಿರಿ)

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 40x60 East, 40 ಅಡಿ ರೋಡಿಗಿದೆ. 40x60, 40x60 South ಅಕ್ಕ-ಪಕ್ಕ, 80 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕೆಲಸಕ್ಕೆ ಬೇಕಾಗಿದ್ದಾರೆ**
ಯುವಕರು ಬೇಕಾಗಿದ್ದಾರೆ. ವಯಸ್ಸು - 18 ರಿಂದ 28 ವಿದ್ಯಾರ್ಹತೆ - ಎಸ್.ಎಸ್.ಎಲ್.ಸಿ , ಪಿ.ಯು.ಸಿ ಹಾಗೂ ಯಾವುದೇ ಪದವಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಆಂಜನೇಯ ಬಡಾವಣೆ ನೇತ್ರಾವತಿ ಹಾಸ್ಟೆಲ್ ರೋಡ್ ದಾವಣಗೆರೆ.
93804 69079

**ಬಾಡಿಗೆಗೆ**
ಪಿ.ಜೆ ಬಡಾವಣೆ, 8ನೇ ಮೇನ್, 8ನೇಕ್ರಾಸ್ 3 ಬೆಡ್ ರೂಂವುಳ್ಳ ಮನೆ, ಪಿ.ಬಿ. ರಸ್ತೆ, ರಿಲೈಯನ್ಸ್ ಪಕ್ಕದ ಬಿಲ್ಡಿಂಗ್, ಮೊದಲನೇ ಮಹಡಿ 2000 ಚ.ಅಡಿಗಳು, ಟೆರೇಸ್ 3300 ಅಡಿಗಳು.
94480 28103

**ಮಾರಾಟಕ್ಕಿದೆ**
ಜಮೀನು ಮತ್ತು 2 ಎಕರೆ ಅಡಿಕೆ ತೋಟ ಮಾರಾಟಕ್ಕಿದೆ. ಹೊದಿಗೆರೆ, ಚನ್ನಗಿರಿ ತಾಲ್ಲೂಕು. ಆಸಕ್ತರು ಸಂಪರ್ಕಿಸಿ :
89512 94984

**ಸೈಟ್ ಮಾರಾಟಕ್ಕೆ ಇವೆ**
ಹರಿಹರ ನಗರದ ವಿಜಯನಗರ ಮತ್ತು ಕೆ.ರ್. ನಗರಕ್ಕೆ ಹತ್ತಿಕೊಂಡಿರುವ ದುಡಾ ಅಪ್ರೂಡ್ ಸೈಟ್ ಮಾರಾಟಕ್ಕೆ ಇವೆ.
93431 10009
98441 24217

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವಸಂಗಮ ಚಿಟ್ಸ್ ಪ್ರೈ.ಲಿ. ಶಿವಸಂಗಮ ಫೈನಾನ್ಸ್ (ರಿ)
ದಾವಣಗೆರೆ ಶಾಖೆಯಲ್ಲಿ ಮಾರ್ಕೆಟಿಂಗ್ & ರಿಕವರಿ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, ಪಿ.ಜೆ. ಬಡಾವಣೆ, 4ನೇ ಮೇನ್, ರಾಮ್ ಅಂಡ್ ಕೋ ಹತ್ತಿರ, ದಾವಣಗೆರೆ.
73533 29440, 81972 20933

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಸೈಟುಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ 30x40 North, ಡಾಲರ್ಸ್ ಕಾಲೋನಿಯಲ್ಲಿ 30x40 North, MCC Block ನಲ್ಲಿ 22x60 West.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಮಾರಾಟಕ್ಕಿದೆ**
ನಿಟ್ಟುವಳ್ಳಿ ಹತ್ತಿರ ನಿಂಚನ ಪಬ್ಲಿಕ್ ಸ್ಕೂಲ್, ಸೈಟ್ 300 Spft (10x30) ನೆಲ ಮಹಡಿ ಮತ್ತು 2ನೇ ಮಹಡಿ
63611 15681

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
ಸಿಂಗಲ್ ಬೆಡ್ ರೂಂ ಮನೆ, 2ನೇ ಮಹಡಿ, ಬಾಗಿಲು ದಕ್ಷಿಣ ದಿಕ್ಕಿಗೆ ಇದೆ. ಸ್ಥಳ : ಆಂಜನೇಯ ಬಡಾವಣೆ, 10ನೇ ಕ್ರಾಸ್, ಎಂ.ಇ.ಎಸ್. ಕಾನ್ವೆಂಟ್ ಹತ್ತಿರ, ದಾವಣಗೆರೆ.
96201 63505

**ಬೇಕಾಗಿದ್ದಾರೆ**
ಪಿಗ್ಮಿ ಹುಡುಗರು ಬೇಕಾಗಿದ್ದಾರೆ
ಮನೆ ಬಾಡಿಗೆ / ಲೀಸ್‌ಗೆ ಇದೆ
ಕೆ.ಆರ್. ರೋಡ್, ಬಿ.ಟಿ. ಲೇಔಟ್.
87108 41654
87110 25322, 87119 72828

**ಸೈಟು ಮಾರಟಕ್ಕೆ ಇದೆ**
ಹಳೇಕುಂದುವಾಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿಂಭಾಗ ಪಶ್ಚಿಮ ಮುಖವಾಗಿರುವ ಡೋರ್ ನಂ. 4153/33 ಅಳತೆ 33x49 ಅಡಿ 1638 ಚ. ಅಡಿ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
63620 15859

**WANTED**
Banking Sector Tele Caller
(Female Only)
Qualification : Any Degree
81508 12961
Interview Time : 11AM

**ಬೇಕಾಗಿದ್ದಾರೆ**
ಅನುಭವವುಳ್ಳ ಸೇಲ್ಸ್ ಮನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ಸ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆ Old Age Care Center ನಲ್ಲಿ ರಾತ್ರಿ ಮತ್ತು ಹಗಲು ಕೆಲಸ ಮಾಡಲು ಗಂಡು ಮತ್ತು ಹೆಣ್ಣು ಕೆಲಸಗಾರರು ಬೇಕಾಗಿದ್ದಾರೆ.
89711 92936

**ಸೈಟ್ ಮಾರಾಟಕ್ಕಿದೆ**
ದಾವಣಗೆರೆಯ ಎಸ್‌ಪಿ ಆಫೀಸ್ ಎದುರು, 20x30 ದಕ್ಷಿಣ ದಿಕ್ಕಿನ ಸೈಟ್ 14 ಲಕ್ಷಕ್ಕೆ, ಯರಗುಂಟೆ ಗ್ರಾ.ಪಂ. ಡೋರ್ ನಂಬರ್, ಇ-ಸೊತ್ತು, ಖಾತೆ, ಇಸಿ ಎಲ್ಲಾ ದಾಖಲಾತಿಗಳು ಲಭ್ಯ, ಸೈಟ್ ರಿಜಿಸ್ಟ್ರೇಷನ್‌ಗೆ ರೆಡಿ ಇದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
76768 55957

**ಬಾಡಿಗೆಗೆ ಸಂಪರ್ಕಿಸಿ**
ಲಹರಿ ಆಟೋಮೋಟಿವ್ಸ್
# 856/17, ಸಬ್ ರಿಜಿಸ್ಟರ್ ಆಫೀಸ್ ಎದುರುಗಡೆ, ಪಿಬಿ ರಸ್ತೆ, ದಾವಣಗೆರೆ-2. ಕೆಳಗಿನ ಮಹಡಿ 1500 ಅಡಿಗಳು, 1ನೇ ಮಹಡಿ 3500 ಅಡಿಗಳು, ಖಾಲಿ ಜಾಗ 4400 ಚ.ಅ., ಸೈಟ್ ಸೈಜ್ 50x88
98444 20009, 90711 19996

**ಮನೆ ಬಾಡಿಗೆಗೆ ಇದೆ**
2BHK 2nd Floor
Rs. 7000/- 3rd Main,
16th Cross, KTJ Nagara
90663 45346

**NEED COMPUTER OPERATOR**
FOR CYBER SHOP
Near Ram & Co Circle, DVG
70221 58935

**ಕೆಲಸ ಖಾಲಿ ಇದೆ**
ಡೆಲಿವರಿ ಕೆಲಸಕ್ಕೆ 3W, 4W, DL ಇರುವವರು ಹುಡುಗರು ಬೇಕಾಗಿದ್ದಾರೆ. ಆಸಕ್ತರು ತಕ್ಷಣ ಸಂಪರ್ಕಿಸಿ :
94817 74321

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಮತ್ತು ಮನೆ ಕೆಲಸ ಮಾಡುವವರು ಬೇಕಾಗಿದ್ದಾರೆ. ಬೆಳಿಗ್ಗೆ 7 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಆಸಕ್ತಿ ಇರುವ ಹೆಣ್ಣು ಮಕ್ಕಳು ಈ ನಂಬರ್‌ಗೆ ಸಂಪರ್ಕಿಸಿ :
84315 29083

**ROBOTIC CLASSES**
Age group :
8 years & above
Bruit Academy
M : 97390 66956

**ಕಾಡು ಬೆಳೆಸಿ ನಾಡು ಉಳಿಸಿ**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**FIRST FLOOR SHOP FOR RENT**
For Office, Mini Bank, Ready Made Garment Shop, Beauty Parlour Etc., (with Wash Room Facility)
N.R. Road, Davangere.
94483 69523

**ಬೇಕಾಗಿದ್ದಾರೆ**
ಮನೆ ಕೆಲಸ, ಅಡುಗೆ ಮತ್ತು ಮಗುವನ್ನು ನೋಡಿಕೊಳ್ಳಲು ಕೆಲಸದವರು ಬೇಕಾಗಿದ್ದಾರೆ. ಕೆಲಸದ ವೇಳೆ: ಬೆಳಿಗ್ಗೆ 8 ರಿಂದ ಸಂಜೆ 8ರವರೆಗೆ ತಿಂಗಳಿಗೆ 7 ಸಾವಿರ ಸಂಬಳ ಹಾಗು ವಾಸಕ್ಕೆ ಮನೆ ನಿಡಲಾಗುವುದು. ದಾವಣಗೆರೆ ಹೊಸ ಕೋರ್ಟ್ ಹತ್ತಿರ.
ಸಂಪರ್ಕಿಸಿ: 63660 20922

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಜಮೀನು ಮಾರಾಟಕ್ಕಿದೆ**
ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ದುಗ್ಗಾವತಿ ಗ್ರಾಮಕ್ಕೆ ಸೇರಿದ ಹೈದ್ರಾಬಾದ್ ಟು ಮಂಗಳೂರು ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ವಾಣಿಜ್ಯ ಉಪಯೋಗಕ್ಕೆ ಅನುಕೂಲವಾದ 2 ಎಕರೆ 90 ಸೆಂಟ್ಸ್ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
99024 90165

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ, ಫೈನಾನ್ಸ್,**
GST & Income Tax
ನೋಂದಣಿ ನವೀಕರಣ ಮಾಡಿಕೊಡುತ್ತೇವೆ.
Mob: 94838 62779

**ಬೇಕಾಗಿದ್ದಾರೆ**
ಶಾಲೆಗೆ ಆಯಾ, ಜವಾನರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ
ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆ, ದಾವಣಗೆರೆ.
99640 17729

**TO LET**
2 BHK House for Lease
Doggalli Compound,
Near LIC Office,
K.R. Road, Davangere.
90359 66066

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**WANTED**
DAVANGERE
* Marketing Executive
* Ladies Accountant
* Godown Incharge
2 to 3 years experience
63620 23451, 97434 37003

**WANTED**
Kitchen Supervisor
• Hotel Manager
• Receptionist • Stewards
• Marketing Executive
SUBMIT YOUR CV :
97421 70194

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ
(ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
9740064163

**ಸೈಟ್ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್ # 402, ಅಳತೆ 22x100 ಅಡಿ, ಉತ್ತರಾಭಿ ಮುಖ
96117 94684
86187 07118

**2BHK ಮನೆ ಲೀಸ್‌ಗೆ ಇದೆ**
'ನಿಶಾಂತ್ ನಿಲಯ' #145
1ನೇ ಮಹಡಿ, ಡಿಸಿಎಂ ರೋಡ್
ರಾಷ್ಟ್ರೋತ್ಥಾನ CBSE ಸ್ಕೂಲ್ ಹಿಂಭಾಗ, ನಿಟ್ಟುವಳ್ಳಿ, ದಾವಣಗೆರೆ.
95900 88880, 98449 27988

# 40% ಆರೋಪಕ್ಕೆ ಸಿಎಂ, ಡಿಸಿಎಂ ಬಹಿರಂಗವಾಗಿ ಕ್ಷಮೆಯಾಚಿಸಲಿ



ದಾವಣಗೆರೆ, ನ.17- ಸಿಎಂ ಸಿದ್ಧರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಜೆಪಿ ವಿರುದ್ಧ ಆರೋಪಿಸಿದ 40 ಪರ್ಸೆಂಟ್ ಆರೋಪಕ್ಕೆ ಲೋಕಾಯುಕ್ತವು ಬಿಜೆಪಿ ಸರ್ಕಾರಕ್ಕೆ ಕ್ಲೀನ್ ಚೀಟ್ ನೀಡಿದೆ. ಹಾಗಾಗಿ ಈ ಕುರಿತು ರಾಜ್ಯದ ಜನರಿಗೆ ಸ್ಪಷ್ಟನೆ ನೀಡುವ ಜತೆಗೆ ಬಹಿರಂಗವಾಗಿ ಕ್ಷಮಾಯಾಚಿಸಬೇಕೆಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಒತ್ತಾಯಿಸಿದರು.

ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುತ್ತಿಗೆದಾರರ ಸಂಘದಲ್ಲಿದ್ದ ಅಂಬಿಕಾಪತಿಯ ವರಿಗೆ ಯಾವುದೇ ಗುತ್ತಿಗೆ ನೀಡಿರದಿದ್ದರೂ ಗುತ್ತಿಗೆದಾರರ ಸಂಘ ದೊಂದಿಗೆ ಪಿತೂರಿ ನಡೆಸಿ ಅಂದು ವಿಪಕ್ಷ ನಾಯಕರಾಗಿದ್ದ ಸಿದ್ಧರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಆಡಳಿತದಲ್ಲಿದ್ದ ಬಿಜೆಪಿ ಸರ್ಕಾರಕ್ಕೆ 40 ಪರ್ಸೆಂಟ್ ಸರ್ಕಾರ ಎಂಬುದಾಗಿ ಆರೋಪಿಸಿದ್ದರು ಎಂದು ದೂರಿದರು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಬಿಜೆಪಿ ವಿರುದ್ಧ ಹುನ್ನಾರ ನಡೆಸಿ 40 ಪರ್ಸೆಂಟ್ ಸರ್ಕಾರ ಎಂದು ಸುಳ್ಳು ಆರೋಪ ಮಾಡಿದ್ದ ಕಾಂಗ್ರೆಸ್, ಪ್ರಸ್ತುತ ಅರ್ಕಾವತಿ, ಮೂಡಾ ಮತ್ತು ವಾಲ್ಮೀಕಿ ಸೇರಿದಂತೆ ಸಾಲು ಸಾಲು ಹಗರಣ ನಡೆಸಿದ್ದು, ಇದೊಂದು 100 ಪರ್ಸೆಂಟ್ ಕಮಿ ಷನ್ ಸರ್ಕಾರ ಎಂದು ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

ಸಿಎಂ ಸಿದ್ಧರಾಮಯ್ಯ ಅರ್ಕಾವತಿ ಬಡಾವಣೆ ಭ್ರಷ್ಟಾಚಾರದಲ್ಲಿ ರಚಿಸಿದ್ದ ಎಸ್ಐಟಿ ತಂಡ ಮತ್ತು ಕೆಂಪಣ್ಣ ಆಯೋಗದಿಂದ ಆರೋಪ ಮುಕ್ತರಾದರು. ಈಗ ವಾಲ್ಮೀಕಿ ಹಗರಣದ ರೂವಾರಿ ನಾಗೇಂದ್ರ ಅವರಿಗೆ ಇದೇ ಎಸ್‌ಐಟಿ ಇಂದ ಕ್ಲೀನ್ ಚೀಟ್ ಕೊಡಿಸಿದ್ದಾರೆ. ಹಿಂದೆ ಕೋವಿಡ್ ಸಂದರ್ಭದಲ್ಲಿ ಭ್ರಷ್ಟಾಚಾರ ಆಗಿದೆ ಎಂದು ಆರೋಪಿಸಿ ಇದೇ ಎಸ್‌ಐಟಿ ತಂಡದೊಂದಿಗೆ ಪಿತೂರಿ ನಡೆಸಿ ಬಿಜೆಪಿ ವಿರುದ್ಧ ಹಗರಣದ ಆರೋಪ ಹೊರಿಸಿದರು, ಮುಂದಿನ ದಿನಗಳಲ್ಲಿ ಇದೇ ಎಸ್‌ಐಟಿಯೇ ನಿಮಗೆ ತಿರುಗು ಬಾಣವಾಗಲಿದೆ ಎಂದರು.

ಮತಾಂಧ ಜಮೀರ್ ನಡೆಯನ್ನು ರಾಜ್ಯದ ಜನರು ಸೇರಿದಂತೆ ಅವರ ಪಕ್ಷದವರೇ ಖಂಡಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ರಾಜ್ಯ ಜನರೇ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದರು.

ಮತಾಂಧ ಜಮೀರ್ ಅಹಮದ್ ಮತ್ತು ವಕ್ಫ್ ವಿರುದ್ಧ ಬಿಜೆಪಿಯಿಂದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಮೂರು ತಂಡಗಳನ್ನಾಗಿ ರಚಿಸಿಕೊಂಡು ಬೃಹತ್ ಮಟ್ಟದಲ್ಲಿ ಹೋರಾಟ ನಡೆಸಲಾಗುತ್ತದೆ. ಈ ಮೂರೇ ತಂಡಗಳು ಅಧಿಕೃತ ಎಂದು ಮಾಹಿತಿ ನೀಡಿದರು.

### 'ಯತ್ನಾಳ್' ಬಾಯಿ ಚಪಲಕ್ಕೆ ಮಾತಾಡುತ್ತಾರೆ..!

**ಬಿ.ಎಸ್ ಯಡಿಯೂರಪ್ಪ ಸೈಕಲ್, ಸ್ಕೂಟರ್ ತುಳಿದು ಪಕ್ಷ ಕಟ್ಟಿದ್ದಾರೆ.ಅವರೇನು ಎಂಟಿಆರ್ ಫುಡ್ ಅಲ್ಲ. ಯತ್ನಾಳ್ ದುಬಾರಿ ಬೆಲೆಯ ಕಾರಿನಲ್ಲಿಯೇ ಓಡಾಡುತ್ತಾರೆ. ಯಡಿಯೂರಪ್ಪ ಬಗ್ಗೆ ಮಾತನಾಡುವ ನೈತಿಕ ಹಕ್ಕು ಯತ್ನಾಳ್‌ಗಿಲ್ಲ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.**

# ಬ್ಯಾಡಗಿಯಲ್ಲಿ ಇಂದು ಗವಿಸಿದ್ದೇಶ್ವರ ಶ್ರೀಗಳ ಪ್ರವಚನ

ಬ್ಯಾಡಗಿ ಪಟ್ಟಣದ ಎಸ್‌ಜೆಜೆಎಂ ತಾಲ್ಲೂಕು ಕ್ರೀಡಾಂಗಣದಲ್ಲಿ ಕೊಪ್ಪಳ



ಗವಿಸಿದ್ದೇಶ್ವರ ಶ್ರೀಗಳ ಅಧ್ಯಾತ್ಮ ಪ್ರವಚನವು ಮೊನ್ನೆ ಆರಂಭಗೊಂಡಿದ್ದು, ಪ್ರತಿದಿನ ಸಂಜೆ 6 ರಿಂದ 7 ರವರೆಗೆ ನಡೆಯಲಿದೆ.

ಜನರಲ್ಲಿ ಧಾರ್ಮಿಕ ಜಾಗೃತಿ ಮೂಡಿಸಲು ಪ್ರತಿದಿನ ಬೆಳಿಗ್ಗೆ 6.30 ರಿಂದ ಸದ್ಭಾವನಾ ಪಾದಯಾತ್ರೆ ನಡೆಯಲಿದೆ. ಇಂದು ಕಲ್ಲೇದೇವರು, ನಾಳೆ ಮಂಗಳವಾರ ಮಲ್ಲೂರು, 20ರಂದು ಬಿಸಲಳ್ಳಿ, 21ರಂದು ಬುಡಪನಹಳ್ಳಿ 23ರಂದು ಕದರಮುಂಡಲಗಿ, 24 ರಂದು ಶಿಡೇನೂರ ಗ್ರಾಮಗಳಲ್ಲಿ ಶ್ರೀಗಳಿಂದ ಸದ್ಭಾವನಾ ಪಾದಯಾತ್ರೆ ನಡೆಯಲಿದೆ.

# ಕ್ವಿಂಟಾಲ್ ಒಂದಕ್ಕೆ ರೂ.2920 ದರದಂತೆ ಭತ್ತ ಖರೀದಿಸಲು ರೈತ ಒಕ್ಕೂಟದ ಆಗ್ರಹ



ದಾವಣಗೆರೆ, ನ.17- ಜಿಲ್ಲೆಯಲ್ಲಿ ಸುಮಾರು 1.5 ಲಕ್ಷ ಎಕರೆಯಲ್ಲಿ ಭತ್ತ ಬೆಳೆ ಬೆಳೆಯಲಾಗಿದ್ದು, ಕೊಯ್ಲು ಪ್ರಾರಂಭವಾಗಿದೆ. ಕಳೆದ ಬೇಸಿಗೆ ಹಂಗಾಮಿನಲ್ಲಿ ಮಳೆ ಇಲ್ಲದೆ ತೀವ್ರ ಬರ ಇದ್ದ ಕಾರಣದಿಂದ ರೈತರು ಬೆಳೆ ಬೆಳೆಯದೆ ಜಮೀನುಗಳನ್ನು ಬೀಳು ಬಿಟ್ಟಿದ್ದರು. ಹೀಗಾಗಿ ಆರ್ಥಿಕ ಸಂಕಷ್ಟಕ್ಕೀಡಾಗಿದ್ದರು.

ಈ ಹಂಗಾಮಿನಲ್ಲಿ ಉತ್ತಮ ಮಳೆಯಾಗಿದ್ದರಿಂದ ಭದ್ರಾ ಡ್ಯಾಂ ತುಂಬಿತ್ತು. ಬೆಳೆಯು ಚೆನ್ನಾಗಿರುವುದರಿಂದ ಜಿಲ್ಲೆಯಲ್ಲಿ 4.5 ಲಕ್ಷ ಮೆಟ್ರಿಕ್ ಟನ್ ಭತ್ತ ಉತ್ಪನ್ನವಾಗುವ ನಿರೀಕ್ಷೆ ಇದೆ. ಆದರೆ ಭತ್ತದ ಖರೀದಿದಾರರ ಒಳಸಂಚಿನಿಂದ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇಲ್ಲ. ಕ್ವಿಂಟಾಲ್ ಒಂದಕ್ಕೆ ರೂ.2500 ರಿಂದ ರೂ.2650 ರವರೆಗೆ ಭತ್ತದ ಧಾರಣೆ ನಡೆದಿದೆ. ಕಳೆದ ಬಾರಿ ತೀವ್ರ ಬರದಿಂದ ಬೆಳೆ ಬೆಳೆಯದೆ. ತತ್ತರಿಸಿದ್ದ ರೈತರು ಈಗಲಾದರೂ ಉತ್ತಮ ಬೆಳೆ ಇದೆ ಆದರೆ ಉತ್ತಮ ಬೆಲೆ ಇಲ್ಲದೆ ರೋಸಿ ಹೋಗಿದ್ದಾರೆ. ಆದ್ದರಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿಸಬೇಕು ಎಂದು ವಿವಿಧ ಬೇಡಿಕೆಗಳೊಂದಿಗೆ ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ರೈತ ಒಕ್ಕೂಟ ಮನವಿ ಸಲ್ಲಿಸಿದೆ.

ತಕ್ಷಣ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತದ ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಪ್ರಕ್ರಿಯೆ ಪ್ರಾರಂಭಿಸಬೇಕು.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಕ್ವಿಂಟಲ್ ಒಂದಕ್ಕೆ ರೂ.2320 ದರ ನಿಗದಿಯಾಗಿದೆ. ಇದು ರೈತನ ಶ್ರಮಕ್ಕೆ ತಕ್ಕದ್ದಲ್ಲವಾಗಿದೆ. ಆದ್ದರಿಂದ ಕನಿಷ್ಠ ಬೆಂಬಲ ಬೆಲೆ ರೂ.2320 ರ ಜೊತೆಗೆ ರೂ.600 ಪ್ರೋತ್ಸಾಹ ಧನ ಸೇರಿಸಿ, ಕ್ವಿಂಟಲ್ ಒಂದಕ್ಕೆ ರೂ.2920 ರಂತೆ ಖರೀದಿಸಬೇಕು.

ರೈತ ಒಕ್ಕೂಟದ ಮನವಿ ಪತ್ರ ಸ್ವೀಕರಿಸಿದ ಜಿಲ್ಲಾಧಿಕಾರಿ ಗಂಗಾಧರಸ್ವಾಮಿಯವರು ತಕ್ಷಣವೇ ಟಾಸ್ಕ್ ಫೋರ್ಸ್ ಸಮಿತಿ ಸಭೆ ಕರೆದು ಭತ್ತ ಖರೀದಿ ಪ್ರಕ್ರಿಯೆ ಪ್ರಾರಂಭಿಸಲಾಗುವುದು. ಎಪಿಎಂಸಿ ಪ್ರಾಂಗಣದಲ್ಲಿ ಪ್ರತಿ ಮಂಡಿಯಲ್ಲಿ ಪ್ರತಿ ಧಾನ್ಯ ರಾಶಿಗೆ ಟೆಂಡರ್ ಮೂಲಕ ಖರೀದಿ ವಹಿವಾಟು ನಡೆಯುವಂತೆ ಬಿಗಿ ಕ್ರಮ ಕೈಗೊಳ್ಳಲಾಗುವುದು. ದಲಾಲಿ, ತೂಕದಲ್ಲಿ ವಂಚನೆ, ತಳಗಾಳು ಪಡೆಯುವುದು ನಿಯಮಬಾಹಿರ. ಇವುಗಳನ್ನು ನಿಯಂತ್ರಣ ಮಾಡಲಾಗುತ್ತದೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ರೈತ ಒಕ್ಕೂಟದ ಮುಖಂಡರುಗಳಾದ ಕೋಳೇನಹಳ್ಳಿ ಬಿ. ಎಂ. ಸತೀಶ್, ಬೆಳವನೂರು ನಾಗೇಶ್ವರರಾವ್, ಎಪಿಎಂಸಿ ಮಾಜಿ ಅಧ್ಯಕ್ಷ ಕುಂದುವಾಡದ ಗಣೇಶಪ್ಪ, ಮಾಜಿ ಮೇಯರ್ ಹೆಚ್.ಎನ್. ಗುರುನಾಥ್, ಮಹಾನಗರಪಾಲಿಕೆ ಮಾಜಿ ಸದಸ್ಯ ಹೆಚ್. ಎನ್. ಶಿವಕುಮಾರ್, ಆರನೇ ಕಲ್ಲು ವಿಜಯಕುಮಾರ್, ಕಬ್ಬೂರು ಶಿವಕುಮಾರ್, ಕುಂದುವಾಡದ ಪುನೀತ್, ಮಹೇಶಪ್ಪ, ಜಿಮ್ಮಿ ಹನುಮಂತಪ್ಪ ಮುಂತಾದವರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಶ್ರೀ ವರಸಿದ್ಧಿ ವಿನಾಯಕ ಸ್ವಾಮಿಯ ಕಾರ್ತಿಕೋತ್ಸವ



ಕೆ.ಆರ್. ಮಾರ್ಕೇಟ್‌ನಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ಸ್ವಾಮಿಯ 34ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಇಂದು ಬೆಳಿಗ್ಗೆ 6 ಗಂಟೆಗೆ ಗಣಹೋಮ, ರುದ್ರಾಭಿಷೇಕ, ಅಲಂಕಾರ ಪೂಜೆ ಕಾರ್ಯಗಳು ನಡೆಯುವವು. ಈ ವಾರ್ಷಿಕೋತ್ಸವ ಕಾರ್ಯಕ್ರಮ ದಿವ್ಯ ಸಾನ್ನಿಧ್ಯವನ್ನು ಅವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸುವರು. 12 ಗಂಟೆಗೆ ಮಹಾಪ್ರಸಾದ ಇರುತ್ತದೆ. ರಾತ್ರಿ 8.30ಕ್ಕೆ ಕಾರ್ತಿಕೋತ್ಸವ, ಸಂಕಷ್ಟಮಿ ಇರುತ್ತದೆ.

# ಎಲೆಬೇತೂರು ಸಹಕಾರಿ ಸಂಘದಲ್ಲಿ ಅಖಿಲ ಭಾರತ ಸಹಕಾರ ಸಪ್ತಾಹ



ದಾವಣಗೆರೆ, ನ. 17- ತಾಲ್ಲೂಕಿನ ಎಲೆಬೇತೂರು ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಹಕಾರಿ ಚಳುವಳಿ ಪಿತಾಮಹ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸಿ, ಸಹಕಾರ ಸಂಘದ ಅಧ್ಯಕ್ಷ ಬಿ.ಎಂ.ನರೇಂದ್ರ ಧ್ವಜಾರೋಹಣ ಮಾಡಿದರು. ಸಂಘದ ನಿರ್ದೇಶಕರಾದ ಎಮ್. ಚಂದ್ರಶೇಖರಪ್ಪ, ಕೆ.ಬಿ. ಸಿದ್ದೇಶ್, ಸಿದ್ದಲಿಂಗಪ್ಪ, ಟಿ.ಬಿ. ರೋಹಿತ್ ಕುಮಾರ್, ಬಿ.ಸಿ. ಷಣ್ಮುಖಪ್ಪ, ಗ್ರಾಮದ ವೈ.ಎಸ್. ರಮೇಶ್, ಕಸಾಪ ನಿರ್ದೇಶಕ ಎಂ.ಷಡಕ್ಷರಪ್ಪ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಎನ್. ಕವಿತಾ, ಕಚೇರಿ ಸಿಬ್ಬಂದಿ ಅಭಿಷೇಕ್ ಹಾಗೂ ಸಂಘದ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಪಹಣಿಯಲ್ಲಿನ ವಕ್ಫ್ ಹೆಸರು ಕಾನೂನು ಬದ್ಧವಾಗಿ ರದ್ಧಾಗಲಿ



ದಾವಣಗೆರೆ, ನ.17- ವಕ್ಫ್ ಕಬಳಿಸಿದ ಪಿ.ಜೆ. ಬಡಾವಣೆಯ 4 ಎಕರೆ 13 ಗುಂಟೆ ಜಾಗವನ್ನು ರಾಜ್ಯ ಸರ್ಕಾರ ಕಾನೂನು ಬದ್ಧವಾಗಿ ಪಹಣಿಯಲ್ಲಿನ ವಕ್ಫ್ ಹೆಸರು ರದ್ದು ಪಡಿಸಲು ಕ್ರಮ ವಹಿಸಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್ ಒತ್ತಾಯಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶನಿವಾರ ಸಂಜೆ ಶ್ರೀರಾಮ ಮಂದಿರದ ಆವರಣದಲ್ಲಿ ಪಿ.ಜೆ. ಬಡಾವಣೆಯ 4.13 ಎಕರೆ ಜಮೀನು ವಕ್ಫ್ ಕಬಳಿಕೆ ವಿಚಾರವಾಗಿ ತಹಶೀಲ್ದಾರ್ ಡಾ. ಅಶ್ವತ್ಥ್ ಮತ್ತು ದೂಡಾ ಅಧ್ಯಕ್ಷ ದಿನೇಶ್ ಕೆ ಶೆಟ್ಟಿ ನೇತೃತ್ವದಲ್ಲಿ ಸಭೆ ನಡೆಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರಿಗೆ ಜನರ ಬಗ್ಗೆ ಕಾಳಜಿ ಇದ್ದಿದ್ದರೆ ಸ್ವತಃ ಅವರೇ ಖುದ್ದಾಗಿ ಸಭೆಯಲ್ಲಿ ಪಾಲ್ಗೊಳ್ಳಬಹುದಿತ್ತು. ಆದರೆ ಇದೊಂದು ಜನರ ಕಣ್ಣೊರೆಸುವ ತಂತ್ರವಾಗಿದೆ ಎಂದು ದೂರಿದರು.

ಈಗಾಗಲೇ 1987ರಲ್ಲಿ ಈ ಜಾಗವನ್ನು ಅಂದಿನ ಕಂದಾಯ ಅಧಿಕಾರಿಗಳು ಖಬರಸ್ಥಾನ ಎಂದು ನಮೂದಿಸಿದ್ದಾರೆ ಎಂಬುದು ದಾಖಲೆಗಳಲ್ಲಿ ಉಲ್ಲೇಖವಿದ್ದರೂ ಸಹ ಇದು ಬಿಜೆಪಿ ವಿರುದ್ಧ ಆರೋಪ ಮಾಡಲಾಗಿದೆ. ನಾವು ಇದನ್ನು ಸಹಿಸುವುದಿಲ್ಲ ಎಂದರು.

ಪಿ.ಜೆ ಬಡಾವಣೆಯ ವಕ್ಫ್ ವಿವಾದಕ್ಕೆ ಬಿಜೆಪಿಯೇ ನೇರಹೊಣೆ ಎಂದು ಹೇಳಿಕೆ ನೀಡಿರುವ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ದಾಖಲೆ ಸಮೇತ ಅದನ್ನು ಸಾಬೀತು ಪಡಿಸಬೇಕು. ಇಲ್ಲವಾದಲ್ಲಿ ಜನರ ಮುಂದೆ ಬಹಿರಂಗವಾಗಿ ಕ್ಷಮೆಯಾಚಿಸಬೇಕೆಂದು ಆಗ್ರಹಿಸಿದರು.

ರಾಜ್ಯಸರ್ಕಾರ ಕೂಡಲೇ ಪಹಣಿಯಲ್ಲಿರುವ ವಕ್ಫ್ ಹೆಸರನ್ನು ರದ್ದು ಪಡಿಸಲು ಸಿದ್ಧವಾಗಬೇಕು. ಇಲ್ಲವಾದರೆ ಬಿಜೆಪಿಯಿಂದ 'ರಕ್ತಕೊಟ್ಟೆವು, ಭೂಮಿ ಬಿಡೆವು' ಘೋಷಣೆ ಅಡಿ ರಾಜ್ಯಾದ್ಯಂತ ಬೃಹತ್ ಹೋರಾಟ ನಡೆಸುತ್ತೇವೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ ಎಚ್ಚರಿಸಿದರು.

ಬಿಜೆಪಿ ವಕೀಲರ ಪ್ರಕೋಷ್ಠದ ರವಿಕುಮಾರ್ ಮಾತನಾಡಿ, 1995ರ ವಕ್ಫ್ ಕಾಯ್ದೆ ಪ್ರಕಾರ ವಕ್ಫ್ ಯಾವುದೇ ಜಾಗವನ್ನು ತನ್ನದೆಂದು ಪರಭಾರೆ ಮಾಡಿಕೊಳ್ಳಲು ಹಕ್ಕು ನೀಡಲಾಗಿದೆ. ಒಂದು ವೇಳೆ ಆ ಜಾಗ ಜನಸಾಮಾನ್ಯರಿಗೆ, ಮಠಮಾನ್ಯ ಹಾಗೂ ದೇವಾಲಯಗಳಿಗೆ ಸೇರಿದ್ದಾದರೆ ದಾಖಲೆ ಸಮೇತ ಅದನ್ನು ಕಾನೂನಾತ್ಮ ಹೋರಾಟ ನಡೆಸಿಯೇ ಪಡೆದುಕೊಳ್ಳಬೇಕು. ಆದರೆ, ವಕ್ಫ್ ಯಾವುದೇ ದಾಖಲೆ ನೀಡದಿದ್ದರೂ ಆ ಜಾಗವನ್ನು ಪರಭಾರೆ ಮಾಡಿಕೊಳ್ಳಲು ಅವಕಾಶವಿದೆ. ಇದು ಕಾಂಗ್ರೆಸ್ ಅವಧಿಯಲ್ಲಿ ನಡೆದಿರುವ ತಿದ್ದುಪಡಿಯಾಗಿದೆ ಎಂದು ಮಾಹಿತಿ ನೀಡಿದರು.

ಪಿ.ಜೆ ಬಡಾವಣೆಯ ಸರ್ವೇ ನಂ. 53ಕೂಡ 1962ರಲ್ಲಿ ಸರ್ಕಾರಿ ಸ್ವಾಧೀನಕ್ಕೆ ಒಳಪಟ್ಟಿದೆ ಎಂದು ಸ್ಪಷ್ಟವಾಗಿದೆ. ಈ ಜಾಗ ಬೀರದೇವರ ಪೂಜಾರಿ ಸಿದ್ದಪ್ಪನವರಿಗೆ ಸೇರಿದ ಜಾಗವೆಂದು ಅದರಲ್ಲಿ ತಿಳಿಸಲಾಗಿದೆ. ಆದರೆ, ಇದ್ದಕ್ಕಿದ್ದಂತೆ 1987ರಲ್ಲಿ ಖಬರಸ್ಥಾನಕ್ಕೆ ಸೇರಿರುವ ಜಾಗವೆಂದು ಅಂದಿನ ಕಂದಾಯ ಅಧಿಕಾರಿಗಳು ದಾಖಲೆ ಸೃಷ್ಟಿಸಿದ್ದಾರೆ. 2014-2015ರ ಪಹಣಿಯಲ್ಲಿ ಈ ಜಾಗವನ್ನು ವಕ್ಫ್ ಸಂಸ್ಥೆಗೆ ಸೇರಿದೆ ಎಂದು ಸ್ಪಷ್ಟವಾಗಿ ದಾಖಲಿಸಲಾಗಿದೆ ಎಂದರು.

ಈ ವೇಳೆ ಬಿ.ಎಂ. ಸತೀಶ್ ಕೊಳೇನಹಳ್ಳಿ, ಕಲ್ಲಪ್ಪ, ಕೊಟ್ರೇಶ್ ಗೌಡ, ಹೆಚ್.ಪಿ. ವಿಶ್ವಾಸ್, ಸಿ. ಶ್ರೀನಿವಾಸ್ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

# ವಕ್ಫ್ ಆಸ್ತಿ ಗೊಂದಲಕ್ಕೆ ಬಿಜೆಪಿ ಸರ್ಕಾರವೇ ಕಾರಣ



ದಾವಣಗೆರೆ, ನ.17- ಇಂದು ರಾಜ್ಯಾದ್ಯಂತ ವಕ್ಫ್ ಆಸ್ತಿ ಹೆಸರಿನಲ್ಲಿ ನಡೆಯುತ್ತಿರುವ ಗೊಂದಲಕ್ಕೆ ಬಿಜೆಪಿ ಸರ್ಕಾರವೇ ಕಾರಣವಾಗಿದ್ದು, ಗೊಂದಲ ಸೃಷ್ಟಿಸಿ ಜನರನ್ನು ದಿಕ್ಕು ತಪ್ಪಿಸಿದ ಬಿಜೆಪಿಯಿಂದ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಸದಾನಂದಗೌಡ ಮತ್ತು ಬಸವರಾಜ ಬೊಮ್ಮಾಯಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಆಗ್ರಹಿಸಿದ್ದಾರೆ.


2008ರಲ್ಲಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಅವರು ಅಂದಿನ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ಮೂಲಕ ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ, 2012ರಲ್ಲಿ ಅಂದಿನ ಮುಖ್ಯಮಂತ್ರಿ ಸದಾನಂದಗೌಡ ಅವರಿಗೆ ವರದಿ ನೀಡಿತ್ತು. ಈ ವರದಿ ಆಧರಿಸಿ ಸದಾನಂದ ಗೌಡ ಅವರು ರಾಜ್ಯದಲ್ಲಿ 27 ಸಾವಿರ ಎಕರೆ ಜಮೀನು ವಕ್ಫ್ ಆಸ್ತಿ ಆಗಿದ್ದು, ಅದನ್ನು ವಾಪಾಸ್ ಪಡೆಯಲಾಗುವುದು ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ಪೂರಕವಾಗಿ ಈ ಹಿಂದಿನ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರೂ ಸಹ ಮುಸ್ಲಿಂ ಸಮಾಜದ ಮುಖಂಡರ ಸಭೆಯಲ್ಲಿ ವಕ್ಫ್ ಆಸ್ತಿ ಬಗ್ಗೆ ಗಂಭಿರವಾಗಿ ಪರಿಗಣಿಸಿ ವಾಪಾಸ್ ನೀಡಲಾಗುವುದು ಎಂದು ತಿಳಿಸಿದ್ದರು.

ಆದರೆ ಇಂದು ತಮ್ಮ ಹೇಳಿಕೆಗಳ ಬಗ್ಗೆ ಚಕಾರವೆತ್ತದ ಬಿಜೆಪಿಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಬಿಜೆಪಿ ಮುಖಂಡರುಗಳು ಗೊಂದಲದ ಹೇಳಿಕೆಗಳನ್ನು ನೀಡಿ ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಮಾಡುತ್ತಿದ್ದಾರೆ. ಇವರ ವಿರುದ್ಧ ಸರ್ಕಾರ ಸುಮೋಟ ಪ್ರಕರಣ ದಾಖಲಿಸುವಂತೆ ದಿನೇಶ್ ಒತ್ತಾಯಿಸಿದ್ದಾರೆ.

ಜಿಲ್ಲಾ ಬಿಜೆಪಿ ಮುಖಂಡರು ವಕ್ಫ್ ಬಗ್ಗೆ ಮಾತನಾಡುವ ವೇಳೆ ಸರಿಯಾದ ಸಾಕ್ಷಿ ಇಟ್ಟು ಮಾತನಾಡಲಿ ಅದನ್ನು ಬಿಟ್ಟು ಜನರನ್ನು ಗೊಂದಲಕ್ಕೆ ಸಿಲುಕಿಸಿ ಅಶಾಂತಿ ಸೃಷ್ಟಿಸುವುದನ್ನು ಬಿಡಲಿ ಎಂದು ಆಗ್ರಹಿಸಿದ್ದಾರೆ.

ಈಗಾಗಲೇ ವಕ್ಫ್ ಮಂಡಳಿ ದಾವಣಗೆರೆ ಪಿ.ಜೆ.ಬಡಾವಣೆಯ ಜಮೀನು ನಮ್ಮದ್ದಲ್ಲ ಎಂದು ಸ್ಪಷ್ಟಪಡಿಸಿದ್ದರೂ ಸಹ ಬಿಜೆಪಿಯವರು ಗೊಂದಲ ಸೃಷ್ಟಿಸುತ್ತಿರುವುದು ಏಕೆ ಎಂದು ಪ್ರಶ್ನಿಸಿದ್ದಾರೆ. ಸಮಾಜದಲ್ಲಿ ಅಶಾಂತಿ ಸೃಷ್ಟಿಸಿ ತಾವು ಅಧಿಕಾರಕ್ಕೆ ಬರಬೇಕೆಂಬ ಕಾರಣವೇ ಎಂದು ಅವರು ಕೇಳಿದ್ದಾರೆ.

# ಸಂಶೋಧನಾ ಪ್ರಬಂಧ ರಚನೆಗೆ ಮಾರ್ಗದರ್ಶಕರ ಕೊರತೆ



ದಾವಣಗೆರೆ, ನ. 17- ಇಂದು ಸಂಶೋಧನಾ ಪ್ರಬಂಧಗಳ ರಚನೆಗೆ ಗುಣಮಟ್ಟದ ಮಾರ್ಗದರ್ಶಕರ ಕೊರತೆ ಕಾಡುತ್ತಿದೆ. ಕೇವಲ ಸಹಿ ಹಾಕುವ ಮಾರ್ಗದರ್ಶಕರಿದ್ದರೆ ಸಾಕು ಎನ್ನುವ ವಾತಾವರಣ ಸಹ ಇದೆ ಎಂದು ಹಿರಿಯ ಸಾಹಿತಿ ಡಾ. ಲೋಕೇಶ ಅಗಸನಕಟ್ಟೆ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಬೇರು-ಚಿಗುರು, ಕನ್ನಡ ಸಾಹಿತ್ಯ-ಸಂಶೋಧನೆ ವಿಚಾರ ವೇದಿಕೆ ದಾವಣಗೆರೆ-ಚಿತ್ರದುರ್ಗ ಉದ್ಘಾಟಿಸಿ ಅವರು ಮಾತನಾಡಿದರು.

ಸಂಶೋಧನೆಗೆ ಮಾರ್ಗದರ್ಶನ ಮಾಡುವವರಿಗೂ ಆಯ್ಕೆ ವಿಷಯದ ಬಗ್ಗೆ ಆಳವಾದ ಜ್ಞಾನ ಇಲ್ಲದಿರುವುದನ್ನು ಕಾಣುತ್ತೇವೆ. ಓದುವ ಹವ್ಯಾಸ, ಕುಳಿತು ಚರ್ಚಿಸುವ ಸೌಹಾರ್ದತೆ ಗೌಣವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಪರಸ್ಪರ ವಿಚಾರ ವಿನಿಮಯ ಮಾಡಿ ಈ ಆಲೋಚನೆಗಳನ್ನು ಶಾಲಾ ಮಕ್ಕಳಿಗೆ ವಿಸ್ತರಿಸಬೇಕೆನ್ನುವ ವೇದಿಕೆ ಆಶಯ ಪ್ರಶಂಸನೀಯ ಎಂದರು.

ಶಿಕ್ಷಕರು, ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವರ್ಗದ ಜನರಲ್ಲಿ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಟಿವಿ, ಮೊಬೈಲ್ ಗಳು ಎಲ್ಲಾ ವಿಚಾರಗಳನ್ನು ಹೇಳುತ್ತವೆ. ಹಾಗಾಗಿ ಯೋಚಿಸುವ ವಾತಾವರಣ ಕಾಣಸಿಗದು. ಅಕ್ಷರ ಮಾಧ್ಯಮ ಓದುಗನಿಗೆ ಕಲ್ಪನಾ ಶಕ್ತಿಯನ್ನಾದರೂ ನೀಡುತ್ತದೆ. ಸಿನಿಮಾ, ಧಾರಾವಾಹಿಗಳು ಯಾವ ಕಲ್ಪನಾ ಶಕ್ತಿಯನ್ನೂ ನೀಡುವುದಿಲ್ಲ ಎಂದು ಹೇಳಿದರು.

ಸಂಶೋಧನೆಗೆ ಸತತ ಶ್ರಮದ ಅಗತ್ಯವಿದೆ. ಆದರೆ ಸಮೂಹ ಮಾಧ್ಯಮಗಳು ನಮಗೇ ಗೊತ್ತಿಲ್ಲದಂತೆ ಆಲೋಚನಾ ಕ್ರಮಗಳನ್ನು ಬಿತ್ತುತ್ತಿವೆ. ಇದಕ್ಕೆ ಪರ್ಯಾಯವಾಗಿ ಇನ್ನೊಂದು ಬಗೆಯ ಚಿಂತನೆಗಳು ನಡೆಯುತ್ತಿವೆ. ಈ ಚಿಂತನೆಯ ಹಿಂದೆ ಅಡಗಿರುವ ಪ್ರಗತಿಪರತೆಯ ಬಗ್ಗೆ ಆಲೋಚನೆ ಮಾಡಬೇಕಾಗಿದೆ ಎಂದರು.

ಹಿರಿಯ ಪತ್ರಕರ್ತ ಬಿ.ಎನ್.ಮಲ್ಲೇಶ್ ಮಾತನಾಡಿ, ಅಧ್ಯಾಪಕರು ಮತ್ತು ಪತ್ರಿಕೆಯ ವರದಿಗಾರನಿಗೆ ಶುದ್ಧ ಕನ್ನಡ ಜ್ಞಾನ ಇರಲೇಬೇಕು. ಕಲಿಸುವ ಬೇರು ಗಟ್ಟಿಯಾಗಿಲ್ಲದಿದ್ದರೆ ಚಿಗುರು ಸರಿಯಾಗಿ ಬರುವುದಿಲ್ಲ. ಬೇರು ಸದೃಢವಾಗಿದ್ದರೆ ಮಾತ್ರ ಒಳ್ಳೆಯ ಚಿಗುರು ಕಾಣಲು ಸಾಧ್ಯ ಎಂದು ಹೇಳಿದರು.

ಡಾ. ವಿಜಯಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಡಿ. ಅಂಜಿನಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ವೃತ್ತಿ ರಂಗಭೂಮಿ ರಂಗಾಯಣ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ, ಪ್ರಾಚಾರ್ಯ ಡಾ.ಎಂ. ಆರ್. ಲೋಕೇಶ್, ಎಎಂಎಸ್ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಡಿ.ಕೆ. ಅಂಜಿನಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ಬಿ.ಪಿ. ರಾಘವೇಂದ್ರ ಸ್ವಾಗತಿಸಿದರು. ಡಾ. ಆರ್.ಬಿ. ಕವಿತಾ ನಿರೂಪಿಸಿದರು. ಬಿ.ಹೆಚ್. ಸಚಿನ್ ವಂದಿಸಿದರು.

# ನಗರದಲ್ಲಿ ಗುಡ್ಡಾಪುರದ ದಾನಮ್ಮ ದೇವಿಯ ಪುರಾಣ ಪ್ರಾರಂಭೋತ್ಸವ



ದಾವಣಗೆರೆ, ನ.17- ಬೇಡಿದ ವರಗಳನ್ನು ಪೂರೈಸುವ ದೇವಿ ಎಂದೇ ಹೆಸರಾಗಿರುವ ಗುಡ್ಡಾಪುರದ ಶ್ರೀ ದಾನಮ್ಮ ದೇವಿಯ ಪುರಾಣವು ನಗರದ ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ನಿನ್ನೆ ಆರಂಭವಾಯಿತು. ಶ್ರೀ ಮಹಾಂತೇಶ ಶಾಸ್ತ್ರಿಗಳು ಹಿರೇಮಠ ಅವರು ಪುರಾಣವನ್ನು ನಡೆಸಿಕೊಡುತ್ತಿದ್ದಾರೆ. ಶ್ರೀ ದೊಡ್ಡಪೇಟೆ ಬಸವೇಶ್ವರ ಸೇವಾ ಸಂಘದ ಬೇತೂರು ರಾಜೇಶ್, ನಿಜಗುಣ ಶಿವಯೋಗಿ, ಮಾಗಾನಹಳ್ಳಿ ಬಸವರಾಜ, ಹೊಳೆಹೊನ್ನೂರು ಈಶಣ್ಣ ಮತ್ತು ಹ್ಯಾಳೇದ್ ಕೊಟ್ರೇಶ್, ಕರಿಬಸಯ್ಯ ಹಾಗೂ ಇತರರು ಉಪಸ್ಥಿತರಿದ್ದರು.

# ಹೆಜ್ಬುಲ್ಲಾ ಮುಖ್ಯ ವಕ್ತಾರ ಹತ

ಬ್ಯೂರತ್, ನ. 17 - ಲೆಬನಾನ್‌ನ ಬ್ಯೂರತ್ ಮಧ್ಯ ಭಾಗದ ಮೇಲೆ ದಾಳಿ ನಡೆಸಿರುವ ಇಸ್ರೇಲ್, ಹೆಜ್ಬುಲ್ಲಾ ಮುಖ್ಯ ವಕ್ತಾರನನ್ನು ಹೊಡೆದುರುಳಿಸಿದೆ.

ಬ್ಯೂರತ್‌ನ ಹಲವು ಕಟ್ಟಡಗಳನ್ನು ಗುರಿಯಾಗಿಟ್ಟುಕೊಂಡು ಇಸ್ರೇಲ್ ದಾಳಿ ನಡೆಸಿದೆ. ಈ ತಾಣಗಳಲ್ಲಿ ಹೆಜ್ಬುಲ್ಲಾ ಉಗ್ರರ ಕೇಂದ್ರ ಕಚೇರಿ ಇದೆ ಎನ್ನಲಾಗಿತ್ತು. ದಾಳಿಗೆ ಮುಂಚೆ ಜನರಿಗೆ ಎಚ್ಚರಿಕೆ ನೀಡಲಾಗಿತ್ತು.

ದಾಳಿಯಲ್ಲಿ ಹೆಜ್ಬುಲ್ಲಾ ಮಾಧ್ಯಮ ವಿಭಾಗದ ಮುಖ್ಯಸ್ಥ ಮೊಹಮ್ಮದ್ ಅಫೀಫ್ ಹತನಾಗಿರುವುದಾಗಿ ಉಗ್ರವಾದಿ ಸಂಘಟನೆ ತಿಳಿಸಿದೆ.

# ಕಲಾವಿದ ಎ.ಮಹಾಲಿಂಗಪ್ಪ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ

ದಾವಣಗೆರೆ, ನ.17- ಧಾರವಾಡದ ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿಯಿಂದ ರಾಜ್ಯೋತ್ಸವ ಪ್ರಶಸ್ತಿ-2024 ಪ್ರಶಸ್ತಿಗೆ ದಾವಣಗೆರೆಯ ಹಿರಿಯ ಚಿತ್ರ ಕಲಾವಿದ ಎ.ಮಹಾಲಿಂಗಪ್ಪ ಭಾಜನರಾಗಿದ್ದಾರೆ.

ಧಾರವಾಡದ ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿಯ ವತಿಯಿಂದ ಜೆ.ಎಸ್.ಎಸ್.ಹಾಲಬಾವಿ ಸ್ಕೂಲ್ ಆಫ್ ಆರ್ಟ್ ಕಾಲೇಜಿನಲ್ಲಿ 69 ನೇ ರಾಜ್ಯೋತ್ಸವದ ನಿಮಿತ್ತ ಆಯೋಜಿಸಿದ್ದ ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ ಪ್ರಕಾಶನದ ಗ್ರಂಥ ಬಿಡುಗಡೆ, ವಿಚಾರ ಸಂಕಿರಣ ಮತ್ತು ಸಾಧಕರಿಗೆ ಸನ್ಮಾನ ಸಮಾರಂಭ ನಡೆಯಿತು.

ರಾಜ್ಯದ ಹಿರಿಯ ಚಿತ್ರ ಕಲಾವಿದರಾದ ಬಾಗಲಕೋಟೆ ಜಿಲ್ಲೆ ರಬಕವಿಯ ಮಹಾದೇವ ಕವಿಶೆಟ್ಟಿ, ದಾವಣಗೆರೆಯ ಎ.ಮಹಲಿಂಗಪ್ಪ, ಧಾರವಾಡದ ಎಂ.ಎಂ.ಜಗತಾಪ, ಉಡುಪಿಯ ದೃಶ್ಯಕಲಾ ಸಾಹಿತಿ ಡಾ.ಉಪಾಧ್ಯಾಯ ಮೂಡುಬೆಳ್ಳಿ ಹಾಗೂ ಕಲಬುರ್ಗಿಯ ಡಾ.ರೆಹಮಾನ್ ಪಟೇಲ್ ಅವರುಗಳಿಗೆ ರಾಜ್ಯೋತ್ಸವ ಪ್ರಶಸ್ತಿ-2024 ಪ್ರಶಸ್ತಿ ನೀಡಿ ಸತ್ಕರಿಸಲಾಯಿತು.



ಕಾರ್ಯಕ್ರಮವನ್ನು ಧಾರವಾಡದ ಜೆ.ಎಸ್.ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಜಿ. ಬಿರಾದಾರ ಉದ್ಘಾಟಿಸಿದರು. ಕರ್ನಾಟಕ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ವಿ.ಎಲ್. ಪಾಟೀಲ ಅಧ್ಯಕ್ಷತೆ ವಹಿಸಿದ್ದರು ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅವರು ಗ್ರಂಥ ಲೋಕಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತ ಕಲಾವಿದ ಎ. ಮಹಾಲಿಂಗಪ್ಪ ವಿದೇಶಗಳ ಪ್ರಮುಖ ಕಲಾ ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿಗಳ ಕುರಿತು ಸ್ಲೈಡ್ ಪ್ರದರ್ಶನ ಮಾಡಿ ಗಮನ ಸೆಳೆದರು.

ಪ್ರೊ ಎಸ್ ಸಿ.ಪಾಟೀಲರ ಗ್ರಂಥಗಳ ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಡಾ.ಬಿ.ಎಂ.ಪಾಟೀಲ್, ಪ್ರೊ. ದತ್ತಾತ್ರೇಯ ಭಟ್, ಪ್ರಿ.ಶಂಕರ ಗುರುವ, ಯುವರಾಜ ಆರ್. ಎಸ್. ಭಾಗವಹಿಸಿ ಕೃತಿಗಳ ಕುರಿತು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಹಿರಿಯ ಕಲಾವಿದ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ಪುರಸ್ಕೃತರಾದ ಎಂ.ಆರ್. ಬಾಳಿಕಾಯಿ, ಕ.ವಿ.ವಿ. ಕುಲಸಚಿವ ಡಾ.ಎ.ಚನ್ನಪ್ಪ, ಡಾ. ಬಸವರಾಜ ಗವಿಮಠ, ಡಾ.ಬಿ.ಎಂ.ಪಾಟೀಲ ಹಾಗೂ ಪ್ರೊ. ಎಸ್.ಸಿ.ಪಾಟೀಲ, ಡಾ.ಶಶಿಕಲಾ ಜಿ.ವಿ., ಬಿ.ಎಸ್.ಬಿ.ಗೌಡರ್, ವೆಂಕಟೇಶ ಕುಮಾರ್ ಕೆ ಎಚ್, ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ ಉಪಸ್ಥಿತರಿದ್ದರು.

ssims SPARSH CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 21ನೇ ನವೆಂಬರ್ 2024 | ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

## ನಗರದಲ್ಲಿ ಇಂದು ಸಂಕಷ್ಟಿ, ಕಾರ್ತಿಕ



ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿನ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಸಂಕಷ್ಟಿ ಮತ್ತು ಕಾರ್ತಿಕ ಮಹೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ 6.30 ರಿಂದ ಅಭಿಷೇಕ, ಸಂಜೆ 6.30 ಕ್ಕೆ ಕಾರ್ತಿಕ ಮಹೋತ್ಸವ, ರಾತ್ರಿ 8.15 ಕ್ಕೆ ಚಂದ್ರದರ್ಶನ ಕಾರ್ಯಕ್ರಮಗಳು ನಡೆಯಲಿವೆ.

## ನಗರದಲ್ಲಿ ಇಂದು ಕನಕದಾಸರ ಜಯಂತ್ಯೋತ್ಸವ



ದಾವಣಗೆರೆ ಜಿಲ್ಲಾಡಳಿತದಿಂದ ಶ್ರೀ ದಾಸ ಶ್ರೇಷ್ಠ ಕನಕ ದಾಸರ 537ನೇ ಜಯಂತಿಯನ್ನು ಗಾಂಧಿ ಭವನದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಏರ್ಪಡಿಸಲಾಗಿದೆ.

ನಂತರ ಜಿಲ್ಲಾಧಿಕಾರಿಗಳ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ.

## ಸ್ಕೂಟಿ ಡಿಕ್ಕಿಯಲ್ಲಿ ಹಾವು



ದಾವಣಗೆರೆ, ನ.17- ಆಕ್ಟಿವಾ ಹೊಂಡಾ ಡಿಕ್ಕಿಯಲ್ಲಿ ಸೇರಿಕೊಂಡಿದ್ದ ಹಾವನ್ನು ಕೊನೆಗೂ ಹೊರ ತೆಗೆದ ಘಟನೆ ಇಲ್ಲಿನ ಅಣ್ಣಾ ನಗರದಲ್ಲಿ ನಡೆಯಿತು.

ಡಿಕ್ಕಿಯನ್ನು ತೆಗೆದಾಗ ಹಾವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಗಾಬರಿಯಾದ ಚಾಲಕ ಕೂಡಲೇ ಸ್ನೇಕ್ ಬಸಣ್ಣ ಅವರಿಗೆ ಕರೆ ಮಾಡಿ ಮಾಹಿತಿ ತಿಳಿಸಿದ್ದಾರೆ. ಸ್ಥಳಕ್ಕೆ ದೌಡಾಯಿಸಿದ ಸ್ನೇಕ್ ಬಸಣ್ಣ, ಡಿಕ್ಕಿಯೊಳಗಿದ್ದ ಹಾವನ್ನು ಹೊರ ತೆಗೆದಿದ್ದಾರೆ. ಇದರಿಂದ ಚಾಲಕ ನಿಟ್ಟುಸಿರುಬಿಟ್ಟಿದ್ದಾನೆ.

**ಬೇಕಾಗಿದ್ದಾರೆ**

ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ (ಫುಲ್ ಟೈಂ)

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ : ಫೋ. : 96861 95326










KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas